# ಆನೇಕಲ್ ಸೂಕ್ತ ಬೆಲೆ ನಿಗದಿಗೆ ಆಗ್ರಹಿಸಿ ಜೆಸಿಬಿ ಮಾಲೀಕರ ಪ್ರತಿಭಟನೆ

• **ಉದಯವಾಹಿನಿ, ಆನೇಕಲ್**

ಸೂಕ್ತ ಬೆಲೆ ನಿಗದಿಗಾಗಿ ಆಗ್ರಹಿಸಿ ಬೆಂಗಳೂರು ಜೆಸಿಬಿ, ಟಿಪ್ಪರ್ ಮಾಲೀಕರ ಸಂಘದಿಂದ ತಾಲ್ಲೂಕಿನಾದ್ಯಂತ ಪ್ರತಿಭಟನೆ ನಡೆಸಿದರು. ಕಳೆದ ಎರಡು ದಿನಗಳಿಂದ ಜೆಸಿಬಿ, ಟಿಪ್ಪರ್, ಟ್ರಾಕ್ಟರ್, ಇಟಾಚಿ ಮಾಲೀಕರು ತಮ್ಮ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸುವ ಮೂಲಕ ಬೆಲೆ ಏರಿಕೆಗೆ ಆಗ್ರಹಿಸಿದರು. ಪಟ್ಟಣದ ಕಾವಲಹೊಸಹಳ್ಳಿ ರಸ್ತೆ, ತಾಲ್ಲೂಕಿನ ಸರ್ಜಾಪುರ, ಚಂದಾಪುರ, ಅತ್ತಿಬೆಲೆಗಳಲ್ಲಿ ಜೆಸಿಬಿ, ಟಿಪ್ಪರ್, ಟ್ರ್ಯಾಕ್ಟರ್ ಮಾಲೀಕರು ತಮ್ಮ ಕೆಲಸಗಳನ್ನು ಸ್ಥಗಿತಗೊಳಿಸಿ ಒಂದೆಡೆ ನಿಲ್ಲಿಸಿ ಪ್ರತಿಭಟನೆ ನಡೆಸಿದರು. ವಿಶಾಲ ಬಯಲಿನಲ್ಲಿ ಟಿಪ್ಪರ್, ಜೆಸಿಬಿ ವಾಹನಗಳನ್ನು ನಿಲ್ಲಿಸಲಾಗಿತ್ತು. ಆನೇಕಲ್ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜೆಸಿಬಿಗಳ ಮೆರವಣಿಗೆ ನಡೆಸಿದರು.

ವಾಹನಗಳ ಬಳಕೆಗೆ ಬೆಲೆ ನಿಗದಿ ಪಡಿಸಲಾಗಿದ್ದು ಜೆಸಿಬಿ ಒಂದು ಗಂಟೆಗೆ 1,200, ಟಿಪ್ಪರ್ ಒಂದು ದಿನದ ಬಾಡಿಗೆ 700, ಜೆಸಿಬಿ ಬ್ರೇಕರ್ಸ್ ಒಂದು ಗಂಟೆಗೆ 1,600 ಏರಿಕೆ ಮಾಡಲಾಗಿದೆ. ಗ್ರಾಹಕರು ಈ ಬೆಲೆ ಅನುಸರಿಸಬೇಕು. ಹಾಗಾಗಿ ಅವರಲ್ಲಿ ಜಾಗೃತಿ ಮೂಡಿಸಲು ಪ್ರತಿಭಟನೆಯ ಮೊರೆ ಹೋಗಿದ್ದೇವೆ ಜೆಸಿಬಿ ಮಾಲೀಕರು ತಿಳಿಸಿದರು. ಅಪಾರ್ಟ್‌ಮೆಂಟ್‌ಗಳ ನಿರ್ಮಾಣ ಮಾಡುವವರ, ಬಿಲ್ಡರ್ಸ್‌ಗಳು ತಮಿಳುನಾಡು, ಆಂಧ್ರಪ್ರದೇಶದ ಟಿಪ್ಪರ್, ಜೆಸಿಬಿಗಳನ್ನು ಬಳಸಿ ಕೊಂಡು ಕೆಲಸವನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಸ್ಥಳೀಯ ಟಿಪ್ಪರ್, ಜೆಸಿಬಿ ಮಾಲೀಕರಿಗೆ ತೊಂದರೆಯಾಗುತ್ತದೆ. ವಾಹನಗಳ ಬೆಲೆಯು ಸಹ ಹೆಚ್ಚಾಗಿದೆ. ನಿರ್ವಹಣೆ ವೆಚ್ಚ ಹೆಚ್ಚಾಗಿದೆ. ಹಾಗಾಗಿ ಸಾರ್ವಜನಿಕರು ಸಹಕರಿಸಬೇಕು ಎಂದು ಬೆಂಗಳೂರು ಜೆಸಿಬಿ ಟಿಪ್ಪರ್ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಗಪ್ಪ ತಿಳಿಸಿದರು.

ಉದಯವಾಹಿನಿ ಚಿತ್ರ



# ಬಗೆಹರಿಯದ ಬಿಡಿಎ ಲೇಔಟ್ ನೋಂದಣಿ ಗೊಂದಲ

● ವಿನಾಯಿತಿ ನೀಡುವಂತೆ ಕೆ-ರೇರಾಗೆ ವಸತಿ ಇಲಾಖೆ ಸೂಚನೆ ● ಎಲ್ಲಾ ವಸತಿ ಯೋಜನೆಗಳಿಗೂ ರೇರಾದಲ್ಲಿ ನೋಂದಣಿ ಕಡ್ಡಾಯ

• **ಉದಯವಾಹಿನಿ, ಬೆಂಗಳೂರು**

ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯಿದೆ 2016ರ ಅನ್ವಯ ಬೆಂಗಳೂರು ನಗರ ಸೇರಿ ರಾಜ್ಯದ ಎಲ್ಲೇ ವಸತಿ ಯೋಜನೆಗಳನ್ನು ಕೈಗೊಂಡರೂ ಅವುಗಳನ್ನು ಕೆ-ರೇರಾದಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿದೆ. ಇದು ಎಲ್ಲಾ ಖಾಸಗಿ ಮತ್ತು ಸರಕಾರಿ ಗೃಹ ನಿರ್ಮಾಣ ಸಂಸ್ಥೆಗಳಿಗೂ ಸಹ ಅನ್ವಯವಾಗಲಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೂ ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯಿದೆ-2016ರ ವ್ಯಾಪ್ತಿಗೆ ಕೂಡ ಒಳಪಡಲಿದ್ದು, ಅದು ವಸತಿ ಯೋಜನೆಗಳ 'ಪ್ರಮೋಟರ್' ಆಗಿ ಪರಿಗಣಿಸಲ್ಪಡುತ್ತದೆ. ಹಾಗಾಗಿ ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನೂ ನೋಂದಣಿ ಮಾಡಬೇಕೆಂದು 2025ರ ನವೆಂಬರ್‌ನಲ್ಲೇ ಕೆ-ರೇರಾ ಆದೇಶ ನೀಡಿದೆ. ಆದರೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆ ಆದೇಶವನ್ನು ಇನ್ನೂ ಒಪ್ಪಲು ತಯಾರಿಲ್ಲ. ಅನಂತರವೂ ಸಹ ಬಿಡಿಎ ನಿರ್ಮಿಸಿದ ಹಲವು ವಸತಿ ಯೋಜನೆಗಳನ್ನು ಜಾಹೀರಾತುಗಳಲ್ಲಿ ಕೆ-ರೇರಾದಲ್ಲಿ ತನ್ನ ವಸತಿ ಯೋಜನೆಗಳನ್ನು ನೋಂದಾಯಿಸಿದ ಸಂಖ್ಯೆಯನ್ನು ಉಲ್ಲೇಖಿಸಿಲ್ಲ. ಈ ಕುರಿತು ಕರ್ನಾಟಕ ಹೋಮ್ ಬೈಯರ್ಸ್ ಫೋರಂ, ವಸತಿ ಇಲಾಖೆಗೆ ಜನವರಿಯಲ್ಲಿ ದೂರು ಸಲ್ಲಿಸಿದ್ದು, ರೇರಾ ನಿಯಮ ಬಿಡಿಎ ಸೇರಿ ಎಲ್ಲರಿಗೂ ಅನ್ವಯಿಸುತ್ತದೆ. ಹಾಗಾಗಿ ಬಿಡಿಎಗೆ ರೇರಾ ನೋಂದಣಿಯಿಂದ ವಿನಾಯಿತಿ ನೀಡಬಾರದು ಎಂದು ಒತ್ತಾಯಿಸಿದೆ. ಆ ದೂರನ್ನು ಪರಿಶೀಲಿಸಿದ ವಸತಿ ಇಲಾಖೆ, ಇದೀಗ ಅರ್ಜಿದಾರರು ಪ್ರಸ್ತಾಪಿಸಿರುವ ಅಂಶಗಳನ್ವಯ ಪರಿಶೀಲಿಸಿ ರೇರಾ ಕಾಯಿದೆ ಮತ್ತು ನಿಯಮಗಳಾನುಸಾರ ಅಗತ್ಯ ಕ್ರಮ ಕೈಗೊಂಡು, ಆ ಬಗ್ಗೆ ಮಾಹಿತಿ ನೀಡುವಂತೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ(ಕೆ-ರೇರಾ) ಕಾರ್ಯದರ್ಶಿಗೆ ಪತ್ರ ಬರೆದು ಸೂಚನೆ ನೀಡಿದೆ.

**ಆದೇಶ ನೀಡಿದ್ದರೂ ಬಿಡಿಎ ಅದನ್ನು ಪಾಲಿಸುತ್ತಿಲ್ಲ**

**ಬಿಡಿಎ ವಸತಿ ಯೋಜನೆಗಳನ್ನು ಕೆ-ರೇರಾದಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿದೆ. ಕೆ-ರೇರಾ ಆದೇಶ ನೀಡಿದ್ದರೂ ಬಿಡಿಎ ಅದನ್ನು ಪಾಲಿಸುತ್ತಿಲ್ಲ. ಕರ್ನಾಟಕ ಹೋಮ್ ಬೈಯರ್ಸ್ ಫೋರಂ ಮತ್ತೆ ದೂರು ನೀಡಿದೆ.**




ಉದಯವಾಹಿನಿ ಚಿತ್ರ

■ **ನಾಡಪ್ರಭು ಕೆಂಪೇಗೌಡ ಲೇಔಟ್ (ಎನ್‌ಪಿಕೆಎಲ್)ಯೋಜನೆಯು 'ರಿಯಲ್ ಎಸ್ಟೇಟ್ ಪ್ರಾಜೆಕ್ಟ್' ಆಗಿದೆ. ಅದನ್ನು ಎರಡು ವಾರಗಳಲ್ಲಿ ನೋಂದಣಿ ಮಾಡಿಸಬೇಕು ಎಂದು ಕೆ-ರೇರಾ ಆದೇಶ ನೀಡಿತ್ತು.**

■ **ರೇರಾ ಕಾಯಿದೆಯ ಉದ್ದೇಶ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಗ್ರಾಹಕ ಹಿತಾಸಕ್ತಿ ರಕ್ಷಿಸುವುದಾಗಿದೆ.**




**ಕೆ-ರೇರಾ ಆದೇಶವೇನಿತ್ತು?:** ನಗರದ ರಾಮಚಂದ್ರ ನಾಯಕ್ ಮತ್ತಿತರರು ಬಿಡಿಎ ವಿರುದ್ಧ ಸಲ್ಲಿಸಿದ್ದ ದೂರಿನ ಅಂತಿಮ ವಿಚಾರಣೆ ನಡೆಸಿದ್ದ ಪ್ರಾಧಿಕಾರದ ಅಧ್ಯಕ್ಷ ಕೆ.ರಾಕೇಶ್ ಸಿಂಗ್ ಮತ್ತು ಸದಸ್ಯ ಜಿ.ಆರ್.ರೆಡ್ಡಿ ಅವರಿದ್ದ ಪೀಠ ಕಳೆದ ನವೆಂಬರ್‌ನಲ್ಲಿ, ''ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯಿದೆ-2016ರ ವ್ಯಾಪ್ತಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೂಡ ಒಳಪಡಲಿದ್ದು, ಅದು ವಸತಿ ಯೋಜನೆಗಳ 'ಪ್ರಮೋಟರ್' ಆಗಿ ಪರಿಗಣಿಸಲ್ಪಡುವುದರಿಂದ. ನಾಡಪ್ರಭು ಕೆಂಪೇಗೌಡ ಲೇಔಟ್ ಯೋಜನೆಯು 'ರಿಯಲ್ ಎಸ್ಟೇಟ್ ಪ್ರಾಜೆಕ್ಟ್' ಆಗಿದೆ.ಅದನ್ನು ಎರಡು ವಾರಗಳಲ್ಲಿ ನೋಂದಣಿ ಮಾಡಿಸಬೇಕು ಎಂದು ಮಹತ್ವದ ಆದೇಶ ನೀಡಿತ್ತು. ಅಲ್ಲದೆ, ತಾನು ಸ್ವತಂತ್ರ ಸಂಸ್ಥೆಯಾಗಿದ್ದು, ಪ್ರಮೋಟರ್ ವ್ಯಾಪ್ತಿಗೆ ಒಳಪಡುವುದಿಲ್ಲ. ರೇರಾ ಕಾಯಿದೆಯಿಂದ ವಿನಾಯಿತಿ ಇದೆ ಎಂಬ ಬಿಡಿಎ ವಾದವನ್ನು ಪ್ರಾಧಿಕಾರ ಸಾರಾಸಗಟಾಗಿ ತಳ್ಳಿಹಾಕಿತ್ತು. ಬಿಡಿಎ ಒಂದು ಪ್ರಮೋಟರ್ ಆಗಿದೆ. ರೇರಾ ಕಾಯಿದೆಯ ಸೆಕ್ಷನ್ 2 ಅಡಿ ನಿವೇಶನಗಳನ್ನು ಮಾರಾಟ ಮಾಡುವ ಯಾವುದೇ ಅಭಿವೃದ್ಧಿ ಪ್ರಾಧಿಕಾರ ಅಥವಾ ಸಾರ್ವಜನಿಕ ಸಂಸ್ಥೆಯು ಸ್ಪಷ್ಟವಾಗಿ 'ಪ್ರಮೋಟರ್' ವ್ಯಾಖ್ಯಾನಕ್ಕೆ ಒಳಪಡುತ್ತದೆ. ಯೋಜನೆಯ ಉದ್ದೇಶ ಅಪ್ರಸ್ತುತವಾಗಿದೆ. ಹಾಗಾಗಿ, ಬಿಡಿಎ ಕೂಡ ಪ್ರಮೋಟರ್ ಆಗಿದೆ ಎಂದು ಆದೇಶಿಸಿದೆ. ಬಿಡಿಎ ನಾಡಪ್ರಭು ಕೆಂಪೇಗೌಡ ಬಡಾವಣೆ ಅಭಿವೃದ್ಧಿಪಡಿಸುತ್ತಿದ್ದು, ಕಾಮಗಾರಿ ಇನ್ನೂ ನಡೆಯುತ್ತಿದೆ. ಹಾಗಾಗಿ, ಅದನ್ನು 'ಕೆ-ರೇರಾ' ಸೆಕ್ಷನ್ 3, 4 ರಡಿ ಎರಡು ವಾರಗಳಲ್ಲಿ ನೋಂದಣಿ ಮಾಡಿಸಬೇಕು. ಅನಂತರ ಬಿಡಿಎ ಯೋಜನೆಯ ನಕ್ಷೆ ಅನುಮೋದನೆ ಸೇರಿ ಎಲ್ಲಾ ದಾಖಲೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು'' ಎಂದೂ ಸೂಚನೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ರೇರಾ ಕಾಯಿದೆಯ ಉದ್ದೇಶ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಗ್ರಾಹಕ ಹಿತಾಸಕ್ತಿ ರಕ್ಷಿಸುವುದಾಗಿದೆ. ಅದ್ದರಿಂದ, ನಿವೇಶನಗಳ ಅಭಿವೃದ್ಧಿ, ಮಾರಾಟ ಮತ್ತು ವಿತರಣೆ ವಿಷಯದಲ್ಲಿ ರೇರಾ ನಿಯಮಗಳು ಬಿಡಿಎ ಕಾಯಿದೆಗಿಂತ ಮೇಲುಗೈ ಸಾಧಿಸುತ್ತವೆ, ಎಂದು ಆದೇಶಿಸಿತ್ತು. ಬಿಡಿಎ ವಿಶೇಷ ಕಾನೂನಿನಡಿಯಲ್ಲಿ ಸ್ಥಾಪಿಸಲಾದ ಶಾಸನಬದ್ಧ ಪ್ರಾಧಿಕಾರ ಮತ್ತು ಲೇಔಟ್‌ಗಳ ರಚನೆಯು ವಾಣಿಜ್ಯ ಚಟುವಟಿಕೆಯಲ್ಲದೆ, ನಗರ ಯೋಜನೆ ಮತ್ತು ಸಾರ್ವಜನಿಕ ಕಲ್ಯಾಣದ ಭಾಗವಾಗಿದೆ. ಬಿಡಿಎ ಕಾಯಿದೆ ರೇರಾ ಮೇಲೆ ಮೇಲುಗೈ ಸಾಧಿಸಬೇಕು ಎಂದು ವಾದಿಸಿ, ತನಗೆ ರೇರಾ ವ್ಯಾಪ್ತಿಯಿಂದ ವಿನಾಯಿತಿ ಇದೆ ಎಂದು ಹೇಳಿಕೊಂಡಿತ್ತು.

> **ಬಿಡಿಎ ಕೂಡ ಪ್ರಮೋಟರ್, ಅದೂ ಕೂಡ ವಸತಿ ಯೋಜನೆಗಳನ್ನು ನೋಂದಾಯಿಸಬೇಕೆಂದು ಕೆ-ರೇರಾ ಆದೇಶಿಸಿದೆ. ಆದರೂ ಬಿಡಿಎ ಇನ್ನೂ ಅದನ್ನು ಪಾಲಿಸುತ್ತಿಲ್ಲ, ಹಾಗಾಗಿ ವಸತಿ ಇಲಾಖೆಗೆ ದೂರು ನೀಡಲಾಗಿತ್ತು. ಅದೀಗ ಮತ್ತೆ ಸ್ಪಷ್ಟನೆ ನೀಡುವಂತೆ ಕೆ-ರೇರಾಗೆ ಸೂಚನೆ ನೀಡಿದೆ.**
>
> **– ಧನಂಜಯ ಪದ್ಮನಾಭಾಚಾರ್, ಸಂಚಾಲಕ, ಕರ್ನಾಟಕ ಹೋಮ್ ಬೈಯರ್ಸ್ ಫೋರಂ**

# ಒಳ ಮೀಸಲಾತಿಯಲ್ಲಿ ಅನ್ಯಾಯ ಮಾರ್ಚ್‌ನಲ್ಲಿ ಬೃಹತ್ ಪ್ರತಿಭಟನೆ

• **ಉದಯವಾಹಿನಿ, ಬೆಂಗಳೂರು**

ಪರಿಶಿಷ್ಟ ಜಾತಿಯ ಒಳ ಮೀಸಲಾತಿ ವರ್ಗಿಕರಣದಲ್ಲಿ ಭೋವಿ, ಬಂಜಾರ, ಕೊರಮ, ಕೊರಚ, ಅಲೆಮಾರಿ ಸಮುದಾಯಗಳಿಗೆ ಆಗಿರುವ ಅನ್ಯಾಯದ ವಿರುದ್ಧ ರಾಜ್ಯ ಸರ್ಕಾರದ ವಿರುದ್ಧ ಮಾರ್ಚ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಚಿತ್ರದುರ್ಗ ಭೋವಿ ಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ತಿಳಿಸಿದರು. ಅಂದ್ರಹಳ್ಳಿಯ ಚಕ್ರ ನಗರದಲ್ಲಿ ಜರುಗಿದ ಸಿದ್ದರಾಮೇಶ್ವರ ಜಯಂತ್ಯುತ್ಸವ ಮತ್ತು ಸಿದ್ದರಾಮೇಶ್ವರ ಭೋವಿ ಬಳಗ- ಬೆಂಗಳೂರು ಸಂಘಟನೆಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಪರಿಶಿಷ್ಟ ಜಾತಿ ಪ್ರವರ್ಗ 'ಸಿ' ಎಂಬ ಸೂತ್ರದ ಮೂಲಕ ಒಳ ಮೀಸಲಾತಿಯೊಳಗೆ ಒಳ ಮೀಸಲಾತಿ ತರುತ್ತಿರುವುದು ಪರಿಶಿಷ್ಟ ಜಾತಿಗೆ ಮಾಡುತ್ತಿರುವ ಅನ್ಯಾಯ, ಪ್ರವರ್ಗ 'ಸಿ' ಸೂತ್ರ ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು.

ಭೋವಿ ಜನಾಂಗ ಶ್ರಮಜೀವಿಗಳು, ಬೆವರು ಸುರಿಸಿ ದುಡಿದು ತಿನ್ನುವ ಜನಾಂಗ, ಅಲೆಮಾರಿಗಳಾಗಿದ್ದು ಕೂಲಿ ಸಿಗುವ ಕಡೆ ವಲಸೆ ಹೋಗುವ ಜನಾಂಗಕ್ಕೆ ರಾಜ್ಯ ಸರ್ಕಾರ ಮೀಸಲಾತಿಯಲ್ಲಿ ಅನ್ಯಾಯ ಮಾಡಿದೆ. ಬಜೆಟ್ ಅಧಿವೇಶನ ಸಮಯದಲ್ಲಿ ಹೋರಾಟ ನಡೆಸಲಾಗುವುದು ಎಂದರು. ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿ ಗೌಡ ಮಾತನಾಡಿ, ಭೋವಿ ಜನಾಂಗ ಅವಿದ್ಯಾವಂತ, ಮುಗ್ಧ, ಪ್ರಾಮಾಣಿಕ ಜನಾಂಗವಾಗಿದ್ದು ರಾಷ್ಟ್ರ ನಿರ್ಮಾಣದಲ್ಲಿ, ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿದೆ ಎಂದರು.

# ರಾಜ್ಯ ಬಜೆಟ್‌ನಲ್ಲಿ ದೇವನಹಳ್ಳಿಗೆ ವಿಶೇಷ ಪ್ಯಾಕೇಜ್ ನಿರೀಕ್ಷೆ

• **ಉದಯವಾಹಿನಿ, ದೇವನಹಳ್ಳಿ**

ವೇಗವಾಗಿ ನಗರೀಕರಣದತ್ತ ಸಾಗುತ್ತಿರುವ ದೇವನಹಳ್ಳಿಗೆ ಪ್ರಸಕ್ತ ರಾಜ್ಯ ಬಜೆಟ್‌ನಲ್ಲಿ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವ ನಿರೀಕ್ಷೆ ಸ್ಥಳೀಯರಲ್ಲಿ ಹೆಚ್ಚಾಗಿದೆ. ಶಿಕ್ಷಣ, ಆರೋಗ್ಯ, ಪರಿಸರ ಸಂರಕ್ಷಣೆ, ಸಾರಿಗೆ, ನ್ಯಾಯಾಂಗ, ಪೊಲೀಸ್ ವ್ಯವಸ್ಥೆ ಬಲಪಡಿಸುವ ಅಗತ್ಯವಿದೆ ಎಂಬುದು ವಿವಿಧ ವಲಯಗಳ ಪ್ರಮುಖ ಬೇಡಿಕೆಯಾಗಿದೆ.

ದೇವನಹಳ್ಳಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆ ಮಾಡಿ ಮಧ್ಯಮ ವರ್ಗದವರಿಗೆ ಅಗ್ಗದ ದರದಲ್ಲಿ ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ ಒದಗಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಪಟ್ಟಣ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ಸಮರೋಪಾದಿಯಲ್ಲಿ ಉತ್ತಮ ರಸ್ತೆಗಳು, ಪಾದಚಾರಿ ಮಾರ್ಗಗಳು ಹಾಗೂ ಜನತಾ ಬಜಾರ್ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಅನುದಾನ ನೀಡಬೇಕೆಂಬ ಆಗ್ರಹವೂ ಕೇಳಿಬಂದಿದೆ.

ನಗರೀಕರಣದ ಪರಿಣಾಮ ದೇವನಹಳ್ಳಿ ಭಾಗದ ಕೆರೆಗಳು ಕಲುಷಿತಗೊಳ್ಳುತ್ತಿದ್ದು, ಕಾಲುವೆಗಳ

ಉದಯವಾಹಿನಿ ಚಿತ್ರ



ಒತ್ತುವರಿಯಿಂದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎನ್ನಲಾಗಿದೆ. ಸಂಸ್ಕರಿತ ನೀರಿನ ಹರಿವು ಹಾಗೂ ಅಂತರ್ಜಲ ಮಾಲಿನ್ಯ ಸ್ಥಳೀಯರ ಆರೋಗ್ಯಕ್ಕೂ ಅಪಾಯ ಉಂಟುಮಾಡುತ್ತಿರುವ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಗೆ ವಿಶೇಷ ಅನುದಾನ ಮೀಸಲಿಡಬೇಕು. ಪಟ್ಟಣದಿಂದ ಪ್ರತಿದಿನ ಸಾವಿರಾರು ಜನರು ಬೆಂಗಳೂರಿಗೆ ಉದ್ಯೋಗಕ್ಕಾಗಿ ಬಸ್‌ಗಳ ಮೂಲಕ ಸಂಚರಿಸುತ್ತಿದ್ದರೂ, ಸುಸಜ್ಜಿತ ಹೈಟೆಕ್ ಬಸ್ ನಿಲ್ದಾಣದ ಕೊರತೆ ತೀವ್ರವಾಗಿ ಕಾಡುತ್ತಿದೆ. ಮಳೆ, ಚಳಿ ಹಾಗೂ ಬಿಸಿಲಿನ ನಡುವೆ ಪ್ರಯಾಣಿಕರು ಸಂಕಷ್ಟ ಅನುಭವಿಸುತ್ತಿರುವುದರಿಂದ ಆಧುನಿಕ ಬಸ್ ನಿಲ್ದಾಣ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಅನುದಾನ ನೀಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಜಿಲ್ಲೆಯ ಕೇಂದ್ರವಾಗಿರುವ ದೇವನಹಳ್ಳಿಯಲ್ಲಿ ಜಿಲ್ಲಾ ನ್ಯಾಯಾಲಯ ಸಂಕೀರ್ಣಕ್ಕೆ ಅನುಮೋದನೆ ದೊರೆತಿದ್ದರೂ, ಪ್ರಮುಖ ನ್ಯಾಯಾಲಯಗಳು ಇನ್ನೂ ಬೆಂಗಳೂರಲ್ಲೇ ಕಾರ್ಯನಿರ್ವಹಿಸುತ್ತಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದ ಎಲ್ಲಾ ಪ್ರಮುಖ ನ್ಯಾಯಾಲಯಗಳನ್ನು ದೇವನಹಳ್ಳಿಗೆ ಸ್ಥಳಾಂತರಿಸಿ, ಸಮರ್ಪಕ ಮೂಲ ಸೌಕರ್ಯ ಹೊಂದಿದ ನ್ಯಾಯಾಲಯ ಕಟ್ಟಡ ನಿರ್ಮಾಣ ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ರಿಯಲ್ ಎಸ್ಟೇಟ್ ಚಟುವಟಿಕೆಗಳು ಹೆಚ್ಚುತ್ತಿರುವುದರಿಂದ ಸರ್ಕಾರಿ ಜಾಗಗಳ ಅಕ್ರಮ ಕಬಳಿಕೆ ಪ್ರಕರಣಗಳು ಏರಿಕೆಯಾಗುತ್ತಿವೆ ಎನ್ನಲಾಗಿದೆ.

ಭೂ ಕಬಳಿಕೆ ನಿಯಂತ್ರಣಕ್ಕೆ ವಿಶೇಷ ದಳ ರಚಿಸಿ, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ. ಒಟ್ಟಾರೆ, ರಾಜ್ಯ ಬಜೆಟ್‌ನಲ್ಲಿ ದೇವನಹಳ್ಳಿಯ ಸಮಗ್ರ ಅಭಿವೃದ್ಧಿಗೆ ಸ್ಪಷ್ಟ ನೀತಿ ಮತ್ತು ಸಾಕಷ್ಟು ಅನುದಾನ ಘೋಷಣೆ ಮಾಡುವ ನಿರೀಕ್ಷೆ ಸಾರ್ವಜನಿಕರಲ್ಲಿ ವ್ಯಕ್ತವಾಗಿದೆ.

# ಶಿವರಾತ್ರಿಗೆ ಯಶವಂತಪುರ - ಮಡಗಾಂವ್ ವಿಶೇಷ ರೈಲು

• **ಉದಯವಾಹಿನಿ, ಬೆಂಗಳೂರು:**

ಶಿವರಾತ್ರಿ ಹಬ್ಬಕ್ಕೆ ಯಶವಂತಪುರ – ಮಡಗಾಂವ್ ವಿಶೇಷ ರೈಲು ಓಡಿಸಲು ರೈಲ್ವೆ ಇಲಾಖೆ ನಿರ್ಧರಿಸಿದೆ. ಮಂಗಳೂರು, ಉಡುಪಿ, ಕಾರವಾರ ಮೂಲಕ ಸಂಚಾರ ನಡೆಲಿದ್ದು, ಕರಾವಳಿ ಭಾಗದ ಪ್ರಯಾಣಿಕರಿಗೆ ಅನುಕೂಲ. ಮಹಾ ಶಿವರಾತ್ರಿ ಹಬ್ಬದ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿವಾರಿಸಲು ನೈರುತ್ಯ ರೈಲ್ವೆಯು ಯಶವಂತಪುರ, ಮಡಗಾಂವ್ ನಡುವೆ ಒಂದು ಟ್ರಿಪ್ ವಿಶೇಷ ರೈಲನ್ನು ಓಡಿಸುತ್ತಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.


**ಯಶವಂತಪುರ ಮಡಗಾಂಗ್ ರೈಲಿನ ವೇಳಾಪಟ್ಟಿ ಏನು?:** ರೈಲು ಸಂಖ್ಯೆ 06507 ಯಶವಂತಪುರ– ಮಡಗಾಂವ್ ವಿಶೇಷ ಎಕ್ಸ್‌ಪ್ರೆಸ್ ರೈಲು ಫೆಬ್ರವರಿ 13ರ ಮಧ್ಯಾಹ್ನ 12.30ಕ್ಕೆ ಯಶವಂತಪುರ ದಿಂದ ಹೊರಟು, ಮರುದಿನ ಬೆಳಿಗ್ಗೆ 06:45ಕ್ಕೆ ಮಡಗಾಂವ್ ತಲುಪಲಿದೆ.

ರೈಲು ಸಂಖ್ಯೆ 06508 ಮಡಗಾಂವ್– ಯಶವಂತಪುರ ವಿಶೇಷ ಎಕ್ಸ್‌ಪ್ರೆಸ್ ರೈಲು ದಿನಾಂಕ ಫೆಬ್ರವರಿ 16 ಬೆಳಿಗ್ಗೆ 11:00 ಗಂಟೆಗೆ ಮಡಗಾಂವ್'ನಿಂದ ಹೊರಟು, ಮರುದಿನ ಬೆಳಿಗ್ಗೆ 04:45ಕ್ಕೆ ಯಶವಂತಪುರವನ್ನು ತಲುಪಲಿದೆ.

**ರೈಲು ಎಲ್ಲೆಲ್ಲಿ ನಿಲುಗಡೆ?:** ಈ ವಿಶೇಷ ರೈಲುಗಳಿಗೆ ಚಿಕ್ಕಬಾಣಾವರ, ಚನ್ನರಾಯಪಟ್ಟಣ, ಹಾಸನ, ಸಕಲೇಶ ಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಬಂಟವಾಳ, ಸುರತ್ಕಲ್, ಮುಲ್ಕಿ, ಉಡುಪಿ, ಬಾರ್ಕೂರು, ಕುಂದಾಪುರ, ಮೂಕಾಂಬಿಕಾ ರೋಡ್ ಬೈಂದೂರು, ಭಟ್ಕಳ, ಮುರ್ಡೇಶ್ವರ, ಹೊನ್ನಾವರ, ಕುಮಟಾ, ಗೋಕರ್ಣ ರೋಡ್, ಅಂಕೋಲಾ ಕಾರವಾರ ನಿಲ್ದಾಣಗಳಲ್ಲಿ ನಿಲುಗಡೆ ಅನ್ನು ಒದಗಿಸಲಾಗಿದೆ.




# ಸೂಲಿಬೆಲೆ: ಅಸ್ಸಾಂನ ನಾಲ್ವರ ಕಾರ್ಮಿಕರು ಶಂಕಾಸ್ಪದ ಸಾವು



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಹೊಸಕೋಟೆ**

ಮುತ್ಸಂದ್ರ ಗ್ರಾಮದಲ್ಲಿ ಬೆಳಗಿನ ಜಾವ ಅಸ್ಸಾಂನ ನಾಲ್ವರು ಕಾರ್ಮಿಕರು ತಾವಿದ್ದ ಮನೆಯಲ್ಲಿ ಶಂಕಾಸ್ಪದವಾಗಿ ಮೃತಪಟ್ಟಿದ್ದಾರೆ. ಜಯಂತ್ ಶಿಂಥೆ (25), ನೀರೇಂದ್ರನಾಥ್ ಟೈಡ್ (24) ಡಾಕ್ಟರ್ ಟೈಡ್ (25), ಧನಂಜಯ್ ಟೈಡ್ (20) ಮೃತ ಕಾರ್ಮಿಕರು. ವೇರ್‌ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ ನಾಲ್ವರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಎರಡನೇ ಪಾಳಿ ಕೆಲಸಕ್ಕೆ ಹೋಗಿರಲಿಲ್ಲ. ಇವರ ಜೊತೆಗೆ ವಾಸವಿದ್ದ ಕಾರ್ಮಿಕ ಅಜಯ್ ಕೆಲಸಕ್ಕೆ ತೆರಳಿದ್ದ. ಆತ ಕೆಲಸವನ್ನು ಮುಗಿಸಿ ರಾತ್ರಿ ಮನೆಗೆ ಹಿಂದಿರುಗಿದಾಗ ನಾಲ್ವರು ಮೃತಪಟ್ಟಿರುವುದು ಗೊತ್ತಾಯಿತು. ಸಾವಿಗೆ ನಿಖರ ಕಾರಣ ಗೊತ್ತಾಗಿಲ್ಲ. ಗ್ಯಾಸ್ ಮೇಲಿಟ್ಟಿದ್ದ ಪಾತ್ರೆಯಲ್ಲಿ ಅನ್ನ ಸೀದು ಹೋಗಿತ್ತು. ಕಿಟಕಿ ಇಲ್ಲದಿದ್ದ ಕೊಠಡಿಯಲ್ಲಿ ಹೊಗೆ ತುಂಬಿತ್ತು. ಉಸಿರುಗಟ್ಟಿ ಸತ್ತಿರಬಹುದು ಎಂದು ಶಂಕಿಸಲಾಗಿದೆ. ಸೂಲಿಬೆಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕುರುಬ ಸಮಾಜ ಪರಿಶಿಷ್ಟ ಪಂಗಡ ಸೇರಿಸಲು ಶಿಫಾರಸು

• **ಉದಯವಾಹಿನಿ, ಬೆಂಗಳೂರು**

ಕುರುಬ ಸಮಾಜ ಎಸ್‌ಟಿ ಸೇರಿಸಲು ರಾಜ್ಯದ ಶಿಫಾರಸು ಮಾಡಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಶ್ರೀ ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರುಪೀಠ ತಿಂಥಣಿ ಬ್ರಿಡ್ಜ್ ವತಿಯಿಂದ ಆಯೋಜಿಸಲಾಗಿದ್ದ ಬ್ರಹ್ಮಲೀನರಾದ ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರ ನುಡಿನಮನ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕುರುಬ ಸಮುದಾಯಕ್ಕೆ ಎಸ್‌ಟಿ ಗೆ ಸೇರಿಸುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಳ್ಳಲಿದ್ದು, ರಾಜ್ಯ ಸರ್ಕಾರ ಈಗಾಗಲೇ ತನ್ನ ಶಿಫಾರಸ್ಸನ್ನು ಕೇಂದ್ರಕ್ಕೆ ಸಲ್ಲಿಸಿದೆ. ಜಾತಿಗಣತಿ ವರದಿಯನ್ನು ಇನ್ನೊಂದು ತಿಂಗಳ ಅವಧಿಯಲ್ಲಿ ಸಲ್ಲಿಕೆಯಾಗಲಿದ್ದು, ಸೂಕ್ತ ಚರ್ಚೆಯ ನಂತರ ಅಂಗೀಕರಿಸಿ ಜಾರಿಗೊಳಿಸಲಾಗುವುದು ಎಂದರು.

ಇಡೀ ರಾಜ್ಯಕ್ಕೆ ಕನಕಗುರುಪೀಠ ಜಾತ್ಯಾತೀತ ಪೀಠವಾಗಿ ಕೆಲಸ ಮಾಡುತ್ತಿದೆ. ವಿದ್ಯಾರ್ಥಿ , ವಿದ್ಯಾರ್ಥಿನಿಯರಿಗೆ ವಸತಿ ನಿಲಯ, ಯಾತ್ರಿನಿವಾಸ ಸೇರಿದಂತೆ ಹಲವು ಬೇಡಿಕೆಗಳಿಗೆ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು. ಎಲ್ಲಾ ದಲಿತ ಹಾಗೂ ಹಿಂದುಳಿದ ವರ್ಗಗಳ ಮಠಗಳಿಗೆ ಬೆಂಗಳೂರಿಗೆ ಸುಮಾರು 50 ಎಕರೆ ಪ್ರದೇಶವನ್ನು ನೀಡಲು ಇತ್ತೀಚೆಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಕನಕಗುರುಪೀಠ ಜಾತ್ಯಾತೀತ ಪೀಠವಾಗಿ ಕೆಲಸ ಮಾಡುತ್ತಿದ್ದು, ಗುರುಪೀಠದಲ್ಲಿ ಪೂಜ್ಯ ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರು ಶಿಕ್ಷಣ, ಆಧ್ಯಾತ್ಮ ಮತ್ತು ಜಾತ್ಯಾತೀತ ಮನೋಭಾವಕ್ಕೆ ಹೆಚ್ಚು ಒತ್ತು ನೀಡಿದ್ದರು. ಕುರುಬ ಸಮುದಾಯಕ್ಕೆ ಮೊದಲ ಬಾರಿಗೆ ಕಾಗಿನೆಲೆ ಗುರುಪೀಠ 1992ರಲ್ಲಿ ಸ್ಥಾಪಿತವಾಗಿ, ಶ್ರೀ ತಾರಕಾನಂದ ಸ್ವಾಮೀಜಿ ಅವರು ಅದರ ಮೊದಲ ಗುರುಗಳಾಗಿದ್ದರು. ಕಲ್ಯಾಣ ಕರ್ನಾಟಕ, ಬೆಂಗಳೂರು ಮೈಸೂರು ಮುಂಬಯಿ ಕರ್ನಾಟಕ ವಿಭಾಗಗಳಿದ್ದು, ಈ ಎಲ್ಲಾ ವಿಭಾಗಗಳಿಗೂ ಪ್ರತ್ಯೇಕ ಗುರುಗಳಿದ್ದು, ಈ ವಿಭಾಗಕ್ಕೆ ಶ್ರೀಸಿದ್ದರಾಮಾನಂದಪುರಿ ಸ್ವಾಮೀಜಿಯವರು ಗುರುಗಳಾಗಿದ್ದರು ಗುರುಪೀಠದಲ್ಲಿ ಶಿಕ್ಷಣ, ಆಧ್ಯಾತ್ಮ, ಜಾತ್ಯಾತೀತ ಮನೋಭಾವಕ್ಕೆ ಹೆಚ್ಚು ಒತ್ತು ನೀಡಿದರು. ಕಾಗಿನೆಲೆ ಗುರುಪೀಠ ಸ್ಥಾಪನೆಯ ಉದ್ದೇಶವೇ ಸಮಸಮಾಜ ನಿರ್ಮಾಣ ವಾಗಿದೆ.ಅವರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಕುಟುಂಬ ವರ್ಗ, ಇಡೀ ಸಮಾಜಕ್ಕೆ ಅವರ ಅಗಲಿಕೆಯನ್ನು ಭರಿಸುವ ಶಕ್ತಿ ಭಗವಂತ ನೀಡಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದರು.

**ಮನುಜರೆಲ್ಲರೂ ಒಂದೇ ಕುಟುಂಬ:** ಕನಕದಾಸರು ಕುಲಕುಲವೆಂದು ಹೊಡೆದಾಡದಿರಿ ಎಂದಂತೆ ಬುದ್ಧಬಸವಾದಿಶರಣರು ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಾ ಬಂದಿದ್ದಾರೆ. ನಮ್ಮ ಸಮಾಜ ವಿವಿಧ ಜಾತಿ ಧರ್ಮ ವರ್ಗ ಭಾಷೆಗಳಿಂದ ಕೂಡಿದೆ ಮನುಜರೆಲ್ಲರೂ ಒಂದೇ ಕುಟುಂಬ ಎಂದು ಭಾವಿಸಬೇಕು. ಸಾಮಾಜಿಕ ಚಿಂತಕರಾದ ಲೋಹಿಯಾ ಅವರು ಮುಂದುವರಿದ ಜಾತಿಯವರು ಸಮಾಜವನ್ನು ದಾರಿತಪ್ಪಿಸುವ ಕೆಲಸವನ್ನು ಮಾಡುತ್ತಾರೆ ಎಂದಿದ್ದರು. ಸಮಾನ ಅವಕಾಶವಿರುವ ಸವಸಮಾಜವನ್ನು ನಿರ್ಮಿಸುವುದು ಅವಶ್ಯಕ.ಶಿಕ್ಷಣ ಇಲ್ಲದೇ ಪ್ರಗತಿ ಸಾಧ್ಯವಿಲ್ಲ. ಕಾಗಿನೆಲೆ ಗುರು ಪೀಠ ಸ್ಥಾಪನೆಯ ಉದ್ದೇಶವೇ ಸಮಸಮಾಜ ನಿರ್ಮಾಣವಾಗಿದೆ. ಯಾವುದೇ ಧರ್ಮವೂ ಪ್ರೀತಿಯನ್ನು ಬೋಧಿಸುತ್ತದೆಯೇ ಹೊರತು ದ್ವೇಷಿಸುವುದನ್ನು ಬೋಧಿಸುವುದಿಲ್ಲ ಎಂದರು.



# ಪ್ರಮುಖ ಟೋಲ್ ಪ್ಲಾಜಾ ಶುಲ್ಕ ಸಂಗ್ರಹ ನಿಯಮಬಾಹಿರ

• **ಉದಯವಾಹಿನಿ, ಬೆಂಗಳೂರು**

ಕನಕಪುರ ರಸ್ತೆಯ ಸೋಮನಹಳ್ಳಿ ಗೇಟ್ ಬಳಿಯ ಟೋಲ್ ಪ್ಲಾಜಾದಲ್ಲಿ ಬಳಕೆದಾರರ ಶುಲ್ಕ ಸಂಗ್ರಹವು ನಿಯಮಬಾಹಿರವಾಗಿದ್ದು, ರಾಷ್ಟ್ರೀಯ ಹೆದ್ದಾರಿ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಹೈಕೋರ್ಟ್ ಆದೇಶಿಸಿದೆ. ಅಲ್ಲದೆ, ಒಂದು ತಿಂಗಳೊಳಗೆ ಸ್ಥಳೀಯ ನಿವಾಸಿಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಉಚಿತ ಪಾಸ್‌ಗಳನ್ನು ನೀಡುವಂತೆ ನಿರ್ದೇಶನ ನೀಡಿದೆ. ಸೋಮನಹಳ್ಳಿ, ನೆಲಗುಳಿ ಮತ್ತು ಕಗ್ಗಲೀಪುರ ಗ್ರಾಮಸ್ಥರು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಸೂರಜ್‌ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ, ರಾಷ್ಟ್ರೀಯ ಹೆದ್ದಾರಿ 209ರಲ್ಲಿ ಟೋಲ್ ಪ್ಲಾಜಾ ಸ್ಥಾಪಿಸಿ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಟೋಲ್ ಪ್ಲಾಜಾವು ಪುರಸಭೆ ಅಥವಾ ಸ್ಥಳೀಯ ನಗರದ ವ್ಯಾಪ್ತಿಯಿಂದ 10 ಕಿ.ಮೀ ದೂರವಿರಬೇಕು ಎಂದು ಆದೇಶಿಸಿದೆ.

**ನಿವಾಸಿಗಳ ವಾಸಸ್ಥಳ ಪರಿಶೀಲಿಸಿ ಉಚಿತವಾಗಿ ಪಾಸ್ ನೀಡಲು ಸೂಚನೆ:** ಜತೆಗೆ ಸರ್ವೀಸ್ ರಸ್ತೆಯನ್ನು ಒದಗಿಸದೆ ಟೋಲ್ ಸಂಗ್ರಹಿಸುತ್ತಿರುವುದು ಏಕಪಕ್ಷೀಯ. ಅಸಮಂಜಸ ಎಂದು ಹೇಳಿರುವ ನ್ಯಾಯಾಲಯ, ನ್ಯಾಷನಲ್ ಹೈವೇ ಟೋಲ್ ಅಥವಾ ಬಳಕೆದಾರರ ಶುಲ್ಕವನ್ನು ವಿಧಿಸದೆ, ಅರ್ಜಿದಾರರು ಮತ್ತು ಅಂತಹ ಪಾಸ್‌ಗಳಿಗಾಗಿ ಅರ್ಜಿ ಸಲ್ಲಿಸಿದ ಎಲ್ಲಾ ಇತರ ನಿವಾಸಿಗಳ ವಾಸಸ್ಥಳ ಪರಿಶೀಲಿಸಿ ಉಚಿತವಾಗಿ ಪಾಸ್‌ಗಳನ್ನು ನೀಡುವಂತೆ ಎನ್‌ಎಚ್‌ಎಐ ಹಾಗೂ ಟೋಲ್ ಪ್ಲಾಜಾ ನಿರ್ವಹಣೆ ಮಾಡುತ್ತಿರುವ ಸಂಸ್ಥೆಗೆ ನಿರ್ದೇಶಿಸಿದೆ. ಈ ಪ್ರಕ್ರಿಯೆ 30 ದಿನಗಳೊಳಗೆ ಪೂರ್ಣಗೊಳಿಸಬೇಕು ಎಂದು ಹೇಳಿದೆ.

ಉದಯವಾಹಿನಿ ಚಿತ್ರ




**ನಿಯಮ ಪಾಲಿಸದಿದ್ದರೆ ಬೇರೆಡೆ ಸ್ಥಳಾಂತರಿಸಬೇಕು**

ಒಂದು ವೇಳೆ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸದಿದ್ದರೆ, ಪ್ರತಿವಾದಿಗಳು ಸೋಮನಹಳ್ಳಿ ಗೇಟ್ ಬಳಿ ಟೋಲ್ ಸಂಗ್ರಹಿಸುವುದನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಟೋಲ್ ಪ್ಲಾಜಾವನ್ನು ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮಗಳು, 2008ರ ಪ್ರಕಾರ ಬೇರೆಡೆ ಸ್ಥಳಾಂತರಿಸಬೇಕು ಎಂದು ನ್ಯಾಯಮೂರ್ತಿ ಗೋವಿಂದರಾಜ್ ಆದೇಶಿಸಿದ್ದಾರೆ.

ಅಗತ್ಯವಿದ್ದರೆ ಸೋಮನಹಳ್ಳಿ ಗೇಟ್ ಬಳಿ ಟೋಲ್ ಪ್ಲಾಜಾವನ್ನು ಬದಲಾಯಿಸಬಹುದು. ರಿಯಾಯಿತಿ ಅಥವಾ ರಿಯಾಯಿತಿ ಪಾಸ್‌ಗಳ ಮೂಲಕ ಕೆಲವು ವರ್ಗದ ಬಳಕೆದಾರರಿಗೆ ಟೋಲ್ ಹೊರೆಯನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿದೆ. ಆದರೆ ಅಗತ್ಯ ಸೇವೆಗಳನ್ನು ಪಡೆಯಲು ಸ್ಥಳೀಯರು ಪದೇಪದೆ ಟೋಲ್ ಪ್ಲಾಜಾ ದಾಟುವುದನ್ನು ಬಿಟ್ಟು ಬೇರೆ ದಾರಿ ಇಲ್ಲದಿರುವುದರಿಂದ ಟೋಲ್ ವಿಧಿಸುವುದನ್ನು ಕಾನೂನು ಬದ್ಧಗೊಳಿಸಲು ಸಾಧ್ಯವಿಲ್ಲಎಂದು ಹೇಳಲಾಗಿದೆ.

ಹಾಲಿ ಪ್ರಕರಣದಲ್ಲಿಪ್ರತಿವಾದಿಗಳು ನಾಗರಿಕರ ವಿರುದ್ಧ ಅತ್ಯಂತ ಕಠಿಣ ಮಾರ್ಗವನ್ನು ಆರಿಸಿಕೊಂಡಿದ್ದಾರೆ. ಅವರು ಸರ್ವೀಸ್ ರಸ್ತೆ ಅಥವಾ ಪರ್ಯಾಯ ರಸ್ತೆಯನ್ನು ಒದಗಿಸಿಲ್ಲ, ಅದರೂ ಬಳಕೆದಾರ ಶುಲ್ಕ ಸಂಗ್ರಹ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಎಲ್ಲಾಮೂರು ಸುರಕ್ಷತಾ ಕ್ರಮಗಳ ಅನುಪಸ್ಥಿತಿಯಲ್ಲಿಸ್ಥಳೀಯ ನಿವಾಸಿಗಳಿಂದ ಟೋಲ್ ನೀಡುವಂತೆ ಒತ್ತಾಯ ಮಾಡುವುದು ಅನ್ಯಾಯ, ದಬ್ಬಾಳಿಕೆಯಾಗಲಿದೆ ಎಂದು ನ್ಯಾಯಪೀಠ ಆದೇಶಿಸಿದೆ.

**ಪ್ರಕರಣದ ಹಿನ್ನೆಲೆ ಏನು?:** ಕಗ್ಗಲೀಪುರ, ತರಳು, ನೆಲಗುಳಿ ಮತ್ತು ಸೋಮನಹಳ್ಳಿ ಗ್ರಾಮ ಪಂಚಾಯಿತಿಗಳು ಸರ್ವೀಸ್ ರಸ್ತೆಗಳನ್ನು ಒದಗಿಸುವವರೆಗೆ ಟೋಲ್ ಪ್ಲಾಜಾವನ್ನು ಸ್ಥಾಪಿಸದಂತೆ ರಸ್ತೆ ಅಭಿವೃದ್ಧಿ ಒಪ್ಪಂದ ಮಾಡಿಕೊಂಡಿರುವವರಲ್ಲಿ ಮನವಿ ಮಾಡಿದರೂ ಅದನ್ನು ಪರಿಗಣಿಸಿಲ್ಲಮತ್ತು ಹೊಸ ಗುತ್ತಿಗೆದಾರರು ಹೊಸ ಟೋಲ್ ಸಂಗ್ರಹಕ್ಕಾಗಿ ಮೂಲಸೌಕರ್ಯಗಳನ್ನು ನಿರ್ಮಿಸಲಿದ್ದಾರೆ ಎಂದು ಹೇಳಿದ್ದರು. ಅದನ್ನು ಪ್ರಶ್ನಿಸಿ ಮಂಜೇಶ್ ಕುಮಾರ್ ಮತ್ತಿತರ ಗ್ರಾಮಸ್ಥರು 2024ರಲ್ಲಿ ನ್ಯಾಯಾಲಯದ ಮೆಟ್ಟಿಲೇರಿದ್ದರು.


ಹೊಸದಾಗಿ ರಚನೆಯಾಗಿರುವ ಗ್ರೇಟರ್‌ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಗೆ ಸೋಮನಹಳ್ಳಿ ಗ್ರಾಮ ಒಳಪಡುತ್ತದೆ ಮತ್ತು ಟೋಲ್ ಪ್ಲಾಜಾ ಅದರ ವ್ಯಾಪ್ತಿಗೆ ಬರುತ್ತದೆ. ಸೋಮನಹಳ್ಳಿ ಗೇಟ್ ಬಳಿಯ ಟೋಲ್ ಪ್ಲಾಜಾ ಮತ್ತು ಮುಂದಿನ ಟೋಲ್ ಪ್ಲಾಜಾ ನಡುವಿನ ಅಂತರ ಸುಮಾರು 89 ಕಿ.ಮೀ.ಗಳಾಗಿದ್ದು, ಪರಿಣಾಮ ಇಡೀ ರಸ್ತೆಗೆ ಲೆಕ್ಕಹಾಕಿ ಅಧಿಕ ಟೋಲ್ ಸಂಗ್ರಹ ಮಾಡಲಾಗುತ್ತಿದೆ ಎಂದು ಅರ್ಜಿದಾರರು ಆರೋಪಿಸಿದ್ದರು.

# ಟ್ಯಾಕ್ಸ್ ಟೆರರಿಸಂ ಐಟಿ ದಾಳಿ ವಿರುದ್ಧ ತಿರುಗಿಬಿದ್ದ ಉದ್ಯಮಿ ಮೋಹನ್ ದಾಸ್ ಪೈ

• **ಉದಯವಾಹಿನಿ, ಬೆಂಗಳೂರು**

ಸಿ.ಜೆ ರಾಯ್ ದುರಂತ ಅಂತ್ಯ ಬೆನ್ನಲ್ಲೇ ಐಟಿ ದಾಳಿಗಳ ವಿರುದ್ಧ ಉದ್ಯಮಿ ಮೋಹನ್ ದಾಸ್ ಪೈ ಅವರು ಕಟುವಾಗಿ ಟೀಕಿಸಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ದಯವಿಟ್ಟು ಸಿಜೆ ರಾಯ್ ಪ್ರಕರಣದ ಬಗ್ಗೆ ಪಾರದರ್ಶಕವಾಗಿ ತನಿಖೆ ಮಾಡಿ. ಈಗಾಗಲೇ ನಾವು ಟ್ಯಾಕ್ಸ್ ಟೆರರಿಸಂನಿಂದ ಸಿದ್ಧಾರ್ಥ್ ಅವರನ್ನು ಕಳೆದುಕೊಂಡಿದ್ದೇವೆ. ಐಟಿ ಅಧಿಕಾರಿಗಳ ಟಾರ್ಚರ್‌ನಿಂದ ಅನೇಕರು ಸಮಸ್ಯೆಗೆ ಒಳಗಾಗಿದ್ದಾರೆ. ಈ ದಾಳಿ ಪ್ರಕ್ರಿಯೆಯೇ ಕ್ರೂರವಾಗಿದೆ. ನಿರ್ಮಲಾ ಸೀತಾರಾಮನ್ ಅವರೇ ಅಧಿಕಾರಿಗಳಿಗೆ ಹೆಚ್ಚು ಹೆಚ್ಚು ಅಧಿಕಾರ ನೀಡಿದ್ದೀರಾ, ಜನಸಾಮಾನ್ಯರನ್ನು ರಕ್ಷಿಸೋರು ಯಾರು ಎಂದು ಪ್ರಶ್ನಿಸಿದ್ದಾರೆ. ತಪ್ಪಾಗಿ ರೇಡ್ ಮಾಡಿದಾಗ ಅಧಿಕಾರಿಗಳಿಗೆ ಶಿಕ್ಷೆ ನೀಡಿದ್ದೀರಾ ಖಂಡಿತಾ ಇಲ್ಲ. ಇದರಿಂದ ದಯವಿಟ್ಟು ಜನರನ್ನು ತಪ್ಪಿಸಿ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಪ್ರಧಾನಿ ನರೇಂದ್ರ ಮೋದಿಯವರಿಗೆ ಮನವಿ ಮಾಡಿದ್ದಾರೆ. ಕಳೆದ ಮೂರು ವರ್ಷದಲ್ಲಿ 72 ಲಕ್ಷ ಕೋಟಿ ರೂ. ನೇರ ತೆರಿಗೆಯಿಂದ ಸಂಗ್ರಹಿಸಿದ್ದೀರಿ. ಇದು ದಾಖಲೆಯ ತೆರಿಗೆ ಸಂಗ್ರಹ.

ಜೊತೆಗೆ ಡಿಜಿಟಲ್‌ಕ್ರಾಂತಿ ಕೂಡ ಹೌದು. ಹಾಗಿದ್ರೆ ಈ ರೀತಿಯ ದಾಳಿಗಳಿಂದ ಎಷ್ಟು ದುಡ್ಡು ಸಂಗ್ರಹಿಸಿದ್ದೀರಾ? ಎಷ್ಟು ಲಿಟಿಗೇಷನ್ ಕೇಸ್‌ಗಳಿವೆ? ಎಷ್ಟು ಕೋರ್ಟ್‌ನಲ್ಲಿ ಪ್ರಕರಣ ಇದೆ? ದಯವಿಟ್ಟು ವಿವರ ಕೊಡಿ. ಟ್ಯಾಕ್ಸ್ ಕಟ್ಟುವವರನ್ನು ರಕ್ಷಣೆ ಮಾಡಿ ಎಂದು ಪೋಸ್ಟ್‌ನಲ್ಲಿ ಮನವಿ ಮಾಡಿಕೊಂಡಿದ್ದಾರೆ.



## ಸರ್ಕಾರದ ಕ್ರಮ ಪ್ರಶ್ನಿಸಿದ್ದ ಟ್ರಸ್ಟ್ – ಟ್ರಸ್ಟ್ ನ ಅರ್ಜಿಯನ್ನು ವಜಾಗೊಳಿಸಿದ ಕರ್ನಾಟಕ ಹೈಕೋರ್ಟ್

# ಬೆಂಗಳೂರಿನ ಉತ್ತರದಲ್ಲಿ ಮೆಗಾ ಮಾರ್ಕೆಟ್‌ಗೆ 172 ಎಕರೆ ಭೂಸ್ವಾಧೀನ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಉತ್ತರ ತಾಲ್ಲೂಕಿನ ಮಾಗಡಿ ರಸ್ತೆಯಲ್ಲಿರುವ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್‌ಗೆ ಸೇರಿದ 172 ಎಕರೆ ಭೂಮಿಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 'ಮೆಗಾ ಮಾರ್ಕೆಟ್' ಯೋಜನೆಗಾಗಿ ಸ್ವಾಧೀನಪಡಿಸಿಕೊಂಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಭೂಸ್ವಾಧೀನ ಎತ್ತಿಹಿಡಿದಿದ್ದ ಹೈಕೋರ್ಟ್‌ನ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯಪೀಠ ವಿಚಾರಣೆ ನಡೆಸಿತು. ವಾದ– ಪ್ರತಿವಾದ ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ವಿಭಾಗೀಯ ಪೀಠ, ಏಕಸದಸ್ಯ ಪೀಠದ ತೀರ್ಪಿನಲ್ಲಿ ಯಾವುದೇ ಲೋಪಗಳಿಲ್ಲ ಎಂದು ಭೂಸ್ವಾಧೀನವನ್ನು ಊರ್ಜಿತಗೊಳಿಸಿದೆ. ಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬಕ್ಕೆ ಟ್ರಸ್ಟ್ ಕಾಲಕಾಲಕ್ಕೆ ನಾನಾ ನ್ಯಾಯಾಲಯಗಳಿಂದ ಪಡೆದ ತಡೆಯಾಜ್ಞೆಗಳೇ ಪ್ರಮುಖ ಕಾರಣ.




ಕಾನೂನುಬದ್ಧ ಕಾಲಮಿತಿಯಲ್ಲೇ ಪ್ರಕ್ರಿಯೆ ನಡೆದಿದೆ. ಮಾರುಕಟ್ಟೆ ಯೋಜನೆಯನ್ನು ವೈಜ್ಞಾನಿಕವಾಗಿ ಜಾರಿಗೆ ತರಲು ಸರಕಾರವು ತುರ್ತು ಕಲಂ ಬಳಕೆ ಮಾಡಿರುವುದು ಕಾನೂನು ಬದ್ಧವಾಗಿದೆ. ಟ್ರಸ್ಟ್ ಈಗಾಗಲೇ ಪರಿಹಾರದ ಮೊತ್ತವನ್ನು ನಿರ್ಧರಿಸುವ ಸಭೆಗಳಲ್ಲಿ ಭಾಗವಹಿಸಿತ್ತು, ಸುಮಾರು 2.36 ಕೋಟಿರೂ. ಪರಿಹಾರವನ್ನು ಪಡೆದುಕೊಂಡಿದೆ. ಹಣ ಪಡೆದ 10 ವರ್ಷಗಳ ನಂತರ ಅದನ್ನು ಹಿಂದಿರುಗಿಸಲು ಪ್ರಯತ್ನಿಸಿ ಭೂಸ್ವಾಧೀನವನ್ನು ಪ್ರಶ್ನಿಸುವುದು ಸರಿಯಲ್ಲ ಎಂದು ವಿಭಾಗೀಯ ಪೀಠ ಹೇಳಿದೆ. ಟ್ರಸ್ಟ್ ಹೆಚ್ಚುವರಿ ಭೂಮಿ ಹೊಂದಿದೆ ಎಂಬ ಕಾರಣಕ್ಕೆ ಸರಕಾರ ಉಳಿದ ಪರಿಹಾರಧನವನ್ನು ತಡೆಹಿಡಿದಿತ್ತು. ಟ್ರಸ್ಟ್ ಆ ಪ್ರಕರಣದಲ್ಲಿ 2022ರಲ್ಲಿ ಗೆಲುವು ಸಾಧಿಸಿದ್ದರೂ, ಅದು ಮೂಲ ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಟ್ರಸ್ಟ್ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿರುವುದನ್ನು ಪ್ರಮುಖವಾಗಿ ಪ್ರಶ್ನಿಸಿತ್ತು.

**ಆದೇಶ ಎತ್ತಿಹಿಡಿದ ಹೈಕೋರ್ಟ್**

ಭೂಸ್ವಾಧೀನ ಪ್ರಕ್ರಿಯೆಯು ಕಾಲಮಿತಿಯೊಳಗೆ ಮುಗಿದಿಲ್ಲ, ಹೊಸ ಭೂಸ್ವಾಧೀನ ಕಾಯಿದೆ–2013 ಅಡಿಯಲ್ಲಿ ಈ ಪ್ರಕ್ರಿಯೆಯು ರದ್ದಾಗಿದೆ ಎಂದು ಟ್ರಸ್ಟ್ ವಾದಿಸಿತ್ತು. ಯಶವಂತಪುರದ ಶ್ರೀಗಂಧದ ಕಾವಲು ಪ್ರದೇಶದಲ್ಲಿಸುಮಾರು 172 ಎಕರೆ, ಹೇರೋಹಳ್ಳಿ ಗ್ರಾಮದಲ್ಲಿ 100 ಎಕರೆ ಭೂಮಿ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್‌ನ ಹೆಸರಿನಲ್ಲಿತ್ತು. ಆದರೆ ಮೆಗಾ ಮಾರ್ಕೆಟ್ ಸ್ಥಾಪನೆಗಾಗಿ ಈ ಶ್ರೀಗಂಧದ ಕಾವಲ್‌ನಲ್ಲಿನ 172 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು 1994ರಲ್ಲಿ, ಹೇರೋಹಳ್ಳಿಯ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು 1999ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು.

## ಮಹಿಳಾ ಟೆಕ್ಕಿ ಮೇಲೆ ಸಾಕು ನಾಯಿ ದಾಳಿ

**ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಬೆಳಗಿನ ನಡಿಗೆಗೆ ತೆರಳಿದ್ದ ಮಹಿಳಾ ಟೆಕ್ಕಿಯ ಮೇಲೆ ನೆರೆಯವರ ಸಾಕು ನಾಯಿ ಭೀಕರವಾಗಿ ದಾಳಿ ಮಾಡಿದೆ. ಈ ಘಟನೆಯಲ್ಲಿ ಮಹಿಳೆಯ ಮುಖ ಹಾಗೂ ಕುತ್ತಿಗೆಗೆ ತೀವ್ರ ಗಾಯಗಳಾಗಿದ್ದು, ವೈದ್ಯರು ಬರೋಬ್ಬರಿ 50ಕ್ಕೂ ಹೆಚ್ಚು ಹೊಲಿಗೆಗಳನ್ನು ಹಾಕಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ನಾಯಿ ಮಾಲೀಕರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ. ಗಾಯಗಳು ಶಾಶ್ವತ ಕಲೆಯಾಗಿ ಉಳಿಯುವ ಸಾಧ್ಯತೆಯಿದೆ ಎಂದು ವೈದ್ಯರು ಆತಂಕ ವ್ಯಕ್ತಪಡಿಸಿದ್ದಾರೆ.**

## ಬೆಂಗಳೂರು ಸಮೀಪದ ಟೋಲ್ ಪ್ಲಾಜಾ ಶುಲ್ಕ ಸಂಗ್ರಹ ನಿಯಮಬಾಹಿರ

**ಬೆಂಗಳೂರಿನ ಕನಕಪುರ ರಸ್ತೆಯ ಸೋಮನಹಳ್ಳಿ ಗೇಟ್ ಬಳಿಯ ಟೋಲ್ ಸಂಗ್ರಹ ನಿಯಮಬಾಹಿರ ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ಸರ್ವೀಸ್ ರಸ್ತೆ ಕಲ್ಪಿಸದೆ ಟೋಲ್ ವಸೂಲಿ ಮಾಡುವುದು ರಾಷ್ಟ್ರೀಯ ಹೆದ್ದಾರಿ ನಿಯಮಗಳ ಸ್ಪಷ್ಟ ಉಲ್ಲಂಘನೆ ಎಂದು ನ್ಯಾಯಾಲಯ ಆಕ್ಷೇಪಿಸಿದೆ. ಒಂದು ತಿಂಗಳೊಳಗೆ ಸ್ಥಳೀಯ ನಿವಾಸಿಗಳಿಗೆ ಉಚಿತ ಪಾಸ್ ನೀಡುವಂತೆ ಸೂಚಿಸಲಾಗಿದ್ದು, ವಿಫಲವಾದರೆ ಟೋಲ್ ಪ್ಲಾಜಾ ಸ್ಥಳಾಂತರಿಸಲು ನಿರ್ದೇಶಿಸಿದೆ. ಈ ಆದೇಶವು ಸರಿಯಾದ ಮೂಲಸೌಕರ್ಯವಿಲ್ಲದೆ ಹಣ ವಸೂಲಿ ಮಾಡುವ ಕ್ರಮಕ್ಕೆ ಬ್ರೇಕ್ ಹಾಕಿದೆ.**

# ಸಮ ಸಮಾಜ ನಿರ್ಮಾಣದಿಂದ ಮಾತ್ರ ದೇಶದ ಅಭಿವೃದ್ಧಿ: ಎನ್.ಮಹೇಶ್

• ಉದಯವಾಹಿನಿ, ರಾಮನಗರ

ಸಮಾಜದಲ್ಲಿ ಆರ್ಥಿಕ, ಸಾಮಾಜಿಕ ಪದ್ಧತಿಗಳಂತಹ ಅಸಮಾನತೆ ಇಂದಿಗೂ ಹಾಗೆಯೇ ಉಳಿದಿದೆ. ಸಮಾನತೆ ತರದೆ ಹೋದರೆ ರಾಜಕೀಯ ಸಮಾನತೆ ಅರ್ಥ ಕಳೆದು ಕೊಳ್ಳುತ್ತದೆ ಎಂದು ಮಾಜಿ ಸಚಿವ ಎನ್.ಮಹೇಶ್ ಅಭಿಪ್ರಾಯಪಟ್ಟರು. ನಗರದಲ್ಲಿ ರಾಷ್ಟ್ರೀಯ ಭೀಮ ಪಡೆ ಜಿಲ್ಲಾ ಸಮಿತಿ ವತಿಯಿಂದ ನಡೆದ ಸಾವಿತ್ರಿಬಾಯಿ ಫುಲೆ ಅವರ 195ನೇ ಜನ್ಮ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಿ ಮಾತನಾಡಿದ ಅವರು, ಸಾವಿತ್ರಿಬಾಯಿ ಫುಲೆ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರಲ್ಲಿದ್ದ ಬದಲಾವಣೆಯ ಸಕಾರಾತ್ಮಕ ಸ್ಫೂರ್ತಿಯ ಗುಣವನ್ನು ನಮ್ಮಲ್ಲಿ ಅಳವಡಿಸಿಕೊಳ್ಳಬೇಕಿದೆ. ಅವರು ಎಲ್ಲಾ ಸಮಸ್ಯೆಗೆ ಪರಿಹಾರ ಕಂಡುಕೊಂಡು, ಎದುರಾದ ಕಷ್ಟಗಳನ್ನು ದಾಟಿ ಗುರಿ ಮುಟ್ಟಿದ ಜ್ಞಾನದ ಶಿಖರಗಳು ಎಂದರು.

ಅಂಬೇಡ್ಕರ್ ಅವರ ಆಶಯಗಳನ್ನು ಮಣ್ಣುಪಾಲು ಮಾಡುತ್ತಿರುವವರ ವಿರುದ್ಧ ನಾವು ಧ್ವನಿ ಎತ್ತಬೇಕಿದೆ. ಸ್ವಾತಂತ್ರ್ಯದ ನಂತರ ದಲಿತರ ಸಾಕ್ಷರತಾ ಪ್ರಮಾಣ ಶೇಕಡ 4ರಷ್ಟಿತ್ತು. ಈಗ ಅದು ಶೇಖಡ 80ರಷ್ಟಾಗಿದೆ. 2047ಕ್ಕೆ ದಲಿತರು ಸೇರಿದಂತೆ ಎಲ್ಲಾ ಸಮುದಾಯಗಳ ಸಾಕ್ಷರತೆ ಪ್ರಮಾಣ ಶೇಕಡ 100ರಷ್ಟು ಆಗಲಿದೆ ಎಂದರು. ಸಮಾನತೆ ತಂದಾಗ ಮಾತ್ರ ಪ್ರಬುದ್ಧ ಭಾರತ ಕಾಣಲು ಸಾಧ್ಯವಾಗಲಿದೆ. ನಮ್ಮ ಸಮುದಾಯಗಳ ಬದುಕಿನ ಶಕ್ತಿಯ ಕಡೆಗೆ ಎಲ್ಲರ ಮನಸ್ಸನ್ನು ಸೆಳೆಯಬೇಕಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಭೀಮ ಪಡೆ ಪದಾಧಿಕಾರಿಗಳು ಎಲ್ಲರಿಗೂ ತರಬೇತಿ ಜೊತೆಗೆ ಉಪಯುಕ್ತ ಮಾಹಿತಿಗಳನ್ನು ಹಂಚುವ ಕೆಲಸ ಮಾಡಿದಾಗ ಮಾತ್ರ ನಮ್ಮ ಸಮುದಾಯಕ್ಕೆ ದಾರಿ ದೀಪವಾಗಲಿದೆ ಎಂದು ಎನ್.ಮಹೇಶ್ ಕಿವಿಮಾತು ಹೇಳಿದರು. ಸಾನಿಧ್ಯ ವಹಿಸಿದ್ದ ಮೈಸೂರು ಅಶೋಕಪುರಂ ಗುರುಪೀಠದ ಪ್ರೊ.ಜ್ಞಾನ ಸ್ವರೂಪಾನಂದ ಸ್ವಾಮೀಜಿ ಮಾತನಾಡಿ ಸಮಾಜದಲ್ಲಿ ಅಸಮಾನತೆ, ಅಸ್ಪೃಶ್ಯತೆಗೆ ಮೂಲ ಕಾರಣವಾಗಿದ್ದ ವರ್ಣ ವ್ಯವಸ್ಥೆ ಮತ್ತು ಜಾತಿ ಪದ್ಧತಿಯನ್ನು ಅಂಬೇಡ್ಕರ್ ರವರು ಬಲವಾಗಿ ವಿರೋಧಿಸಿದವರು. ಜಾತಿ ಆಧಾರಿತ ಶ್ರೇಣೀಕರಣವೂ ಮಾನವ ಹಕ್ಕುಗಳ ಉಲ್ಲಂಘನೆ ಎಂದು ಪ್ರತಿಪಾದಿಸಿದ ಅವರು ಸಂವಿಧಾನದ ಮೂಲಕ ಎಲ್ಲಾ ವರ್ಗದ ಜನರಿಗೂ ಸಮಾನತೆ ತಂದುಕೊಟ್ಟವರು ಎಂದು ಹೇಳಿದರು.

ವೇದಗಳ ಕಾಲದಲ್ಲಿ ವರ್ಣ ವ್ಯವಸ್ಥೆ ಇತ್ತು. ಅದರಲ್ಲಿ ಪಂಚಮ ವರ್ಣರೆಂದು ಪರಿಗಣಿಸಲಾಗಿದ್ದ ಅಸ್ಪೃಶ್ಯರು ನಿಕೃಷ್ಟವಾದ ವ್ಯವಸ್ಥೆಯಲ್ಲಿ ಬದುಕುತ್ತಿದ್ದರು. ಇದರ ವಿರುದ್ಧ ಬುದ್ಧ, ಅಂಬೇಡ್ಕರ್ ಆದಿಯಾಗಿ ಹೋರಾಟಗಳು ನಡೆಯುತ್ತಲೇ ಬಂದಿವೆ. ಅಂಬೇಡ್ಕರ್ ರವರು ಸಂವಿಧಾನ ರಚಿಸಿ ಪ್ರಾಣಿ ವರ್ಗಕ್ಕಿಂತಲೂ ಕೀಳಾಗಿದ್ದ ದಲಿತ ಸಮುದಾಯವನ್ನು ದೈವಿಕ ಪ್ರಭುತ್ವದಲ್ಲಿ ಕೂರಿಸಿದ ಮಹಾನ್ ನಾಯಕ ಎಂದು ಬಣ್ಣಿಸಿದರು.

ಧಮ್ಮ ದೀವಿಗೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಶೂದ್ರರೆಂಬಕಾರಣಕ್ಕೆ ದಲಿತರಿಗೆ ಕಲಿಕೆಯ ಅವಕಾಶದಿಂದ ವಂಚಿತರನ್ನಾಗಿ ಮಾಡಲಾಗಿತ್ತು. ಅಂತಹ ಸಂದರ್ಭದಲ್ಲಿ ಸಾವಿತ್ರಿ ಬಾಯಿ ಫುಲೆ ದಂಪತಿ ಶಿಕ್ಷಣ ಕ್ರಾಂತಿ ಮಾಡುವ ಮೂಲಕ ದೇವಾನುದೇವತೆಗಳನ್ನು ಮೀರಿಸುವ ಸಾಧನೆ ಮಾಡಿದರು ಎಂದು ಹೇಳಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.


ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಶಿವಕುಮಾರಸ್ವಾಮಿ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಡಾ.ಎಚ್.ಎಸ್.ಕುಮಾರ್, ಜಿಲ್ಲಾ ಕೆಡಿಪಿ ಗುರುಮೂರ್ತಿ, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಹರೀಶ್ ಬಾಲು, ರಾಷ್ಟ್ರೀಯ ಭೀಮ ಪಡೆ ರಾಜ್ಯಾಧ್ಯಕ್ಷ ಆತ್ಮಾನಂದ, ಜಿಲ್ಲಾಧ್ಯಕ್ಷ ಭರತ್ ಕುಮಾರ್, ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಉಪಾಧ್ಯಕ್ಷ ಸೋಮಶೇಖರ್, ಕನಕಪುರ ತಾಲ್ಲೂಕು ಅಧ್ಯಕ್ಷ ಶಿವರಾಜು, ಬೆಂಗಳೂರು ನಗರ ಅಧ್ಯಕ್ಷೆ ಗಿರಿಜಮ್ಮ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.




ಧ್ವನಿ ಎತ್ತ ಬೇಕಿದೆ

## ಮಿನಿ ನ್ಯೂಸ್

### ಏಳನೇ ವರ್ಷದ ದಾಸೋಹ ದಿನ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ




• ಉದಯವಹಿನಿ, ಗುಂಡ್ಲುಪೇಟೆ

ಗುರುಮಲ್ಲೇಶ್ವರ ಯುವಕರ ಸಂಘ ಹಾಗೂ ಸಿದ್ದಗಂಗಾ ಮಠದ ಭಕ್ತಾದಿಗಳ ಸಂಯುಕ್ತಾಶ್ರಯದಲ್ಲಿ ಏಳನೇ ವರ್ಷದ ದಾಸೋಹ ದಿನಾಚರಣೆ ಕಾರ್ಯಕ್ರಮವನ್ನ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮೂಡಗೂರು ಮಠಾಧ್ಯಕ್ಷ ಪರಮಪೂಜ್ಯ ಶ್ರೀ ಇಮ್ಮಡಿ ಉದ್ದಾನ ಸ್ವಾಮಿಗಳು, ಕಬ್ಬಹಳ್ಳಿ ಜಂಗಮ ಮಠದ ಗುರುಸಿದ್ದ ಸ್ವಾಮಿಗಳು, ಬೊಮ್ಮನಹಳ್ಳಿ ಪಟ್ಟದ ಮಠದ ಗುರುಶಾಂತ ಸ್ವಾಮಿಗಳು ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಭಕ್ತರು ಭಾಗವಹಿಸಿದ್ದರು.

ದಾಸೋಹ ದಿನದ ನಿಮಿತ್ತ ಭಜನೆ ಕಾರ್ಯಕ್ರಮ , ಪೂಜಾ ಕೈಂಕರ್ಯಗಳು ನಡೆದವು, ಭಕ್ತರಿಗಾರಿ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು. ಈ ಸಂಧರ್ಭದಲ್ಲಿ ವೀರಶೈವ ಮುಖಂಡ ಹಂಗಳ ಎಚ್.ಎಸ್.ನಂಜಪ್ಪ, ಪುತ್ಥನಪುರ ರಾಜಶೇಖರ್, ಕಬ್ಬಹಳ್ಳಿ ಮಹೇಶ್, ವೀರಶೈವ ಮಹಾಸಭಾ ಚಾಮರಾಜನಗರ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಕಣ್ಣೇಗಾಲ ಸ್ವಾಮಿ, ಕೆ.ಸಿ.ಮಧು, ಸುನಿಲ್ ಮೂಡ್ಲು, ಮಂಜು ಶಿವಪುರ, ಪಾನು ಮಡಹಳ್ಳಿ, ತಹಶೀಲ್ದಾರ್ ಎಂ.ತನ್ಮಯ್, ಬಸವಣ್ಣ ಚನ್ನಮಲ್ಲಿಪುರ, ಹಂಗಳ ಪ್ರಣಯ್ , ಗುರುಪ್ರಸಾದ್ ವೀರನಪುರ, ಮಂಜು ದೇವರಹಳ್ಳಿ, ಮಂಜುನಾಥ್ ಬಾಚಹಳ್ಳಿ, ಸುಬ್ಬು ಬಲಚವಾಡಿ ಸೇರಿದಂತೆ ಹಲವರು ಭಾಗಿಯಾಗಿದ್ದರು.




• ಉದಯವಾಹಿನಿ, ರಾಮನಗರ
ಬೆಂಗಳೂರು ದಕ್ಷಿಣ ಜಿಲ್ಲೆ ಕನಕಪುರದಲ್ಲಿ ಕನಕೋತ್ಸವದ ಅಂಗವಾಗಿ ನಡೆದ 19 ವರ್ಷದೊಳಗಿನ ಷಟಲ್ ಬ್ಯಾಡ್ಮಿಟನ್ ಡಬಲ್ಸ್ ವಿಭಾಗದಲ್ಲಿ ದಿಗಂತ್ ಗೌಡ ಪಿ.ಎಸ್ ಮತ್ತು ಆಯುಷ್ ಗೌಡ ಪ್ರಥಮ ಸ್ಥಾನ ಪಡೆದಿದ್ದಾರೆ.

## ದ.ರಾ.ಬೇಂದ್ರೆ ಜಗತ್ತಿನ ಸಾಹಿತ್ಯ ಕ್ಷೇತ್ರದ ಗಮನ ಸೆಳೆದ ಸಾಹಿತಿ: ನಾರಾಯಣಸ್ವಾಮಿ




• ಉದಯವಾಹಿನಿ, ಶಿಡ್ಲಘಟ್ಟ

ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿಗಳಲ್ಲಷ್ಟೆ ಅಲ್ಲ ಯುವಜನರು ಮತ್ತು ಹಿರಿಯರು ಸೇರಿದಂತೆ ಎಲ್ಲಾ ವರ್ಗದವರಲ್ಲೂ ಪುಸ್ತಕ ಓದುವ ಅಭ್ಯಾಸ ಮತ್ತು ಹವ್ಯಾಸ ಕಡಿಮೆ ಆಗುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾರಾಯಣಸ್ವಾಮಿ ಬೇಸರ ವ್ಯಕ್ತಪಡಿಸಿದರು. ತಾಲ್ಲೂಕಿನ ಬಶೆಟ್ಟಹಳ್ಳಿ ಹೋಬಳಿ ಗೌಡನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಸಾಪದಿಂದ ಹಮ್ಮಿಕೊಂಡಿದ್ದ ಅಂಬಿಕಾತನಯದತ್ತ ದ.ರಾ.ಬೇಂದ್ರೆ ಜನ್ಮ ದಿನಾಚರಣೆಯಲ್ಲಿ ಮಾತನಾಡಿದರು.

ನಾಡು ಐತಿಹಾಸಿಕ, ಪೌರಾಣಿಕ, ಪ್ರಾಕೃತಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಎಷ್ಟು ಉನ್ನತ ಸ್ಥಿತಿಯಲ್ಲಿ ಇದ್ದೇವೋ ಅದೇ ರೀತಿ ಸಾಹಿತ್ಯಕ್ಕೆ ಮತ್ತು ಸಾಹಿತಿಗಳಿಗೆ ನಮ್ಮಲ್ಲಿ ಕೊರತೆ ಇಲ್ಲ. ಇಡೀ ಜಗತ್ತಿನ ಸಾಹಿತ್ಯ ಕ್ಷೇತ್ರದ ಗಮನ ಸೆಳೆದ ಸಾಹಿತಿಗಳನ್ನು ನಮ್ಮ ನಾಡು ನೀಡಿದೆ ಎಂದರು. ದ.ರಾ.ಬೇಂದ್ರೆ ಅವರು ಎಲ್ಲಾ ವರ್ಗದವರೂ ಓದುವ ಸಾಹಿತ್ಯವನ್ನು ರಚಿಸಿದ್ದು ಅವುಗಳನ್ನು ಎಲ್ಲರೂ ಓದಬೇಕು. ಅವರು ಸಾಹಿತ್ಯದ ಮೂಲಕ ನೀಡಿದ ಸಂದೇಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ನಮ್ಮ ಬದುಕನ್ನು ಇನ್ನಷ್ಟು ಉತ್ತಮಪಡಿಸಿಕೊಳ್ಳಬೇಕೆಂದು ಕೋರಿದರು.

ಮುಖ್ಯ ಶಿಕ್ಷಕ ಎಂ.ದೇವರಾಜ್ ಮಾತನಾಡಿ, ದ.ರಾ.ಬೇಂದ್ರೆ ಅವರು ಜೀವನದ ಹಾದಿ, ಅವರ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳ ಬಗ್ಗೆ ವಿವರಿಸಿದರು. ವಿದ್ಯಾರ್ಥಿಗಳಿಗೆ ನಡೆಸಿದ ಭಾಷಣ, ಕವನ ವಾಚನ, ಗಾಯನ ಸ್ಪರ್ಧೆಯಲ್ಲಿ ವಿಜೇತ ವಿನಯ್ ಕುಮಾರ್, ರಾಕೇಶ್, ವರ್ಷಿಣಿ, ಮೋಹಿತ್, ಪೃಥ್ವಿ, ಸಹನ, ಭಾನುಪ್ರಿಯ, ಅಶ್ವಿನಿ, ಗಾನವಿ, ಪಲ್ಲವಿ, ಕೀರ್ತನ ಇನ್ನಿತರೆ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಯಿತು.

# ಬೇಸಿಗೆಗೂ ಮುನ್ನವೇ ಮಾರುಕಟ್ಟೆಗಳಲ್ಲಿ ಕಲ್ಲಂಗಡಿ ಲಗ್ಗೆ

## ನಿರ್ಜಲೀಕರಣ ನೀಗಿಸುವ ಈ ಹಣ್ಣಿನ ಬೆಲೆ ಹೇಗಿದೆ?, 25ರಿಂದ 30 ರೂಪಾಯಿವರೆಗೆ ಮಾರಾಟ


• ಉದಯವಾಹಿನಿ, ಚನ್ನಪಟ್ಟಣ

ಬೇಸಿಗೆ ಆರಂಭಕ್ಕೂ ಮುನ್ನವೇ ಜನಸಾಮಾನ್ಯರ ದಾಹ ನೀಗಿಸುವ ಕಲ್ಲಂಗಡಿ ಹಣ್ಣು ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ರಾತ್ರಿ ವೇಳೆ ವಿಪರೀತ ಚಳಿ ಕಾಡಿದರೆ, ಬೆಳಗ್ಗೆಯಾದ ಕೂಡಲೇ ಬಿಸಿಲಿನ ಝಳ ಹೆಚ್ಚಾಗುತ್ತಿದ್ದು, ಜನರು ತಂಪು ಪಾನೀಯಗಳು ಹಾಗೂ ಹಣ್ಣುಗಳತ್ತ ಮುಖ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಚಳಿಗಾಲ ಕಳೆಯುವ ಮುನ್ನವೇ ಕಲ್ಲಂಗಡಿ ಹಣ್ಣುಗಳು ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳುತ್ತಿವೆ. ದಿನದಿಂದ ದಿನಕ್ಕೆ ಬಿಸಿಲಿನ ತಾಪ ಹೆಚ್ಚುತ್ತಿದ್ದು, ಚಳಿಗಾಲದಲ್ಲೇ ಜನರಿಗೆ ಬೇಸಿಗೆಯ ಅನುಭವವಾಗುತ್ತಿದೆ.

ಬಿಸಿಲಿನ ಜಳ ಹೆಚ್ಚಿದಂತೆ ದಾಹ ತೀರಿಸಿಕೊಳ್ಳಲು ಜನರು ತಂಪು ಪಾನೀಯಗಳು, ಹಣ್ಣುಗಳ ಸೇವನೆಗೆ ಮುಂದಾಗುತ್ತಿದ್ದಾರೆ. ಇದರ ಪರಿಣಾಮವಾಗಿ ನಗರ ಹಾಗೂ ಪಟ್ಟಣದ ನಾನಾ ಪ್ರದೇಶಗಳಲ್ಲಿ ಹಣ್ಣುಗಳ ಮಾರಾಟದ ಅಂಗಡಿಗಳು ತಾತ್ಕಾಲಿಕವಾಗಿ ತಲೆಎತ್ತಿವೆ. ಚಳಿಗೆ ನಡುಗುತ್ತಿದ್ದ ಜನತೆ ಈಗ ಬಿಸಿಲಿನ ತಾಪಕ್ಕೆ ಬೆವರುತ್ತಿದ್ದು, ವಾತಾವರಣದ ವೈಪರೀತ್ಯದಿಂದ ನಿಧಾನವಾಗಿ ಬೇಸಿಗೆಯತ್ತ ವಾಲುತ್ತಿದೆ. ಇದನ್ನು ಗಮನಿಸಿದ ವ್ಯಾಪಾರಿಗಳು ಕೂಡ ಬೇಸಿಗೆಯಲ್ಲಿಹೆಚ್ಚು ಬೇಡಿಕೆ ಇರುವ ಪದಾರ್ಥಗಳ ಸಂಗ್ರಹಣೆಗೆ ಮುಂದಾಗಿದ್ದಾರೆ. ಈಗಾಗಲೇ ಕಲ್ಲಂಗಡಿ, ಸೌತೆಕಾಯಿ, ಎಳನೀರು, ತಂಪು ಪಾನೀಯಗಳ ಮಾರಾಟಗಾರರು ಜನಸಂದಣಿ ಪ್ರದೇಶಗಳು, ಪ್ರಮುಖ ವೃತ್ತಗಳು, ರಸ್ತೆ ಬದಿಗಳಲ್ಲಿ ಅಂಗಡಿಗಳನ್ನು ತೆರೆಯುತ್ತಿದ್ದಾರೆ. ಜಿಲ್ಲೆಯಲ್ಲಿ ಕೆಲ ರೈತರು ಮಾತ್ರ ಅಲ್ಪ ಪ್ರಮಾಣದಲ್ಲಿ ಕಲ್ಲಂಗಡಿ, ಸೌತೆಕಾಯಿ ಬೆಳೆಯುತ್ತಿದ್ದು, ಜನಸಾಮಾನ್ಯರ ಬೇಡಿಕೆಯನ್ನು ಪೂರೈಸಲು ವ್ಯಾಪಾರಿಗಳು ಪಕ್ಕದ ರಾಜ್ಯಗಳಾದ ತಮಿಳುನಾಡು ಹಾಗೂ ಆಂಧ್ರಪ್ರದೇಶಗಳಿಂದ ಕಲ್ಲಂಗಡಿಯನ್ನು ಲೋಡ್‌ಗಟ್ಟಲೇ ಖರೀದಿಸಿ ತರುತ್ತಿದ್ದಾರೆ.

> ಹಿಂದೆ ಮಳೆಗಾಲ, ಚಳಿಗಾಲ, ಬೇಸಿಗೆಗಾಲ ಎಂದು ಸ್ಪಷ್ಟವಾಗಿ ಹವಾಮಾನವನ್ನು ಗುರುತಿಸಬಹುದಾಗಿತ್ತು. ಆದರೆ ಈಗ ಪ್ರಕೃತಿ ಏರುಪೇರಿನಿಂದಾಗಿ ಯಾವ ಸಮಯದಲ್ಲಿ ಯಾವ ಹವಾಮಾನ ಇರುತ್ತದೆ ಎಂಬುದನ್ನು ಊಹಿಸುವುದೇ ಕಷ್ಟವಾಗಿದೆ. ಸಾಮಾನ್ಯವಾಗಿ ಫೆಬ್ರವರಿ ಅಂತ್ಯದಲ್ಲಿ ಮಾರುಕಟ್ಟೆಗೆ ಬರುತ್ತಿದ್ದ ಕಲ್ಲಂಗಡಿ ಹಣ್ಣು ಈ ಬಾರಿ ಜನವರಿಯಲ್ಲೇ ಲಗ್ಗೆ ಇಟ್ಟಿದೆ. ಮುಂದಿನ ದಿನಗಳಲ್ಲಿ ಬಿಸಿಲಿನ ಝಳ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದ್ದು, ಕಲ್ಲಂಗಡಿ ಹಣ್ಣಿಗೆ ಬೇಡಿಕೆ ಹೆಚ್ಚಲಿದೆ.
>
> -ಸುರೇಶ್, ಕಲ್ಲಂಗಡಿ ಬೆಳೆಗಾರ

**ಎಷ್ಟಿದೆ ಬೆಲೆ?:** ಪ್ರಸ್ತುತ ಮಾರುಕಟ್ಟೆಯಲ್ಲಿಪ್ರತಿ ಕೆ.ಜಿ. ಕಲ್ಲಂಗಡಿ ಹೋಲ್‌ಸೇಲ್‌ನಲ್ಲಿ 20ರಿಂದ 22 ರೂಪಾಯಿಗೆ ಲಭ್ಯವಿದ್ದು, ರಿಟೇಲ್‌ನಲ್ಲಿ 25 ರಿಂದ 30 ರೂಪಾಯಿವರೆಗೆ ಮಾರಾಟವಾಗುತ್ತಿದೆ. ಬಿಸಿಲಿನ ತಾಪ ಇನ್ನಷ್ಟು ಹೆಚ್ಚಾದಂತೆ ದರದಲ್ಲೂಏರಿಕೆ ಆಗುವ ಸಾಧ್ಯತೆ ಇದೆ ಎಂದು ವ್ಯಾಪಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.



**ದಾಹ ನಿವಾರಣೆ ಜತೆಗೆ**

### ಬೆಲೆ ಏರಿಕೆಯಾಗುವ ಸಾಧ್ಯತೆ

ಚನ್ನಪಟ್ಟಣದಲ್ಲಿ ಬೇಸಿಗೆಗೂ ಮೊದಲೇ ಕಲ್ಲಂಗಡಿ ಹಣ್ಣು ಮಾರುಕಟ್ಟೆಗೆ ಬಂದಿದೆ. ಬಿಸಿಲಿನ ತಾಪ ಹೆಚ್ಚಾಗುತ್ತಿದ್ದು, ಜನರು ತಂಪು ಪಾನೀಯಗಳು ಹಾಗೂ ಹಣ್ಣುಗಳತ್ತ ಮುಖ ಮಾಡುತ್ತಿದ್ದಾರೆ. ಇದರಿಂದಾಗಿ ವ್ಯಾಪಾರಿಗಳು ಪಕ್ಕದ ರಾಜ್ಯಗಳಿಂದ ಕಲ್ಲಂಗಡಿ ತರಿಸುತ್ತಿದ್ದಾರೆ. ಕಲ್ಲಂಗಡಿ ಹಣ್ಣು ದಾಹ ತೀರಿಸುವುದಲ್ಲದೆ, ದೇಹಕ್ಕೆ ಪೋಷಕಾಂಶಗಳನ್ನು ಒದಗಿಸುತ್ತದೆ. ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ.

**ಆರೋಗ್ಯಕಾರಿ:** ಬಿಸಿಲಿನ ತಾಪದಿಂದ ದೇಹದಲ್ಲಿನ ನೀರಿನ ಅಂಶ ಬೆವರಿನ ರೂಪದಲ್ಲಿ ಕಡಿಮೆಯಾಗುವುದರಿಂದ ನಿರ್ಜಲೀಕರಣ ಮತ್ತು ಸುಸ್ತು ಕಾಣಿಸಿಕೊಳ್ಳುತ್ತದೆ. ಇಂತಹ ಸಂದರ್ಭಗಳಲ್ಲಿ ನೀರಿನ ಅಂಶದ ಜತೆಗೆ ಉತ್ತಮ ಪೋಷಕಾಂಶಗಳನ್ನು ಹೊಂದಿರುವ ಕಲ್ಲಂಗಡಿ ಹಣ್ಣಿನ ಸೇವನೆ ಅತ್ಯಂತ ಉಪಯುಕ್ತವಾಗಿದೆ. ಸಹಜವಾಗಿಯೇ ಬೇಸಿಗೆಯಲ್ಲಿ ಜನರು ಈ ಹಣ್ಣಿನತ್ತ ಹೆಚ್ಚು ಆಕರ್ಷಿತರಾಗುತ್ತಾರೆ.

**ಪೋಷಕಾಂಶಗಳ ಆಗರ - ಕಲ್ಲಂಗಡಿ:** ಕಲ್ಲಂಗಡಿ ಹಣ್ಣು ದಾಹ ನಿವಾರಣೆ ಮಾತ್ರವಲ್ಲದೆ ದೇಹಕ್ಕೆ ಅಗತ್ಯವಾದ ಅನೇಕ ಪೋಷಕಾಂಶಗಳನ್ನು ಒದಗಿಸುತ್ತದೆ. ಇದರಲ್ಲಿಪೊಟ್ಯಾಷಿಯಮ್, ಮೆಗ್ನೀಷಿಯಮ್, ಸಿಟ್ರುಲಿನ್ ಹೆಚ್ಚಾಗಿ ಇದ್ದು, ರಕ್ತದೊತ್ತಡ ನಿಯಂತ್ರಣಕ್ಕೆ ಸಹಕಾರಿ. ವಿಟಮಿನ್ ಎ ಮತ್ತು ಸಿ ಸೇರಿದಂತೆ ಹಲವು ಪೋಷಕಾಂಶಗಳನ್ನು ಹೊಂದಿರುವ ಈ ಹಣ್ಣು ದೇಹದ ಉಷ್ಣತೆಯನ್ನು ನಿಯಂತ್ರಿಸುವುದರ ಜತೆಗೆ ಹೃದಯ ಆರೋಗ್ಯ, ಕಣ್ಣಿನ ರಕ್ಷಣೆ, ಚರ್ಮದ ಆರೋಗ್ಯ, ಜೀರ್ಣಕ್ರಿಯೆ ಹಾಗೂ ಮಲಬದ್ಧತೆ ನಿಯಂತ್ರಣಕ್ಕೂ ಸಹಕಾರಿಯಾಗಿದೆ.

## ಉದ್ಯೋಗ ಮೇಳ: 74 ಕಂಪನಿ, ಉದ್ಯೋಗಾಕಾಂಕ್ಷಿಗಳು ಭಾಗಿ





• ಉದಯವಾಹಿನಿ, ತಿಪಟೂರು

ನಗರದ ಎಸ್‌ವಿಪಿ ವಿದ್ಯಾಸಂಸ್ಥೆ ಆವರಣದಲ್ಲಿ ಜೆಡಿಎಸ್ ಮುಖಂಡ ಕೆ.ಟಿ. ಶಾಂತಕುಮಾರ್ ನೇತೃತ್ವದಲ್ಲಿ ಬೃಹತ್ ಉದ್ಯೋಗ ಮೇಳ ನಡೆಯಿತು. 74 ಕಂಪನಿಗಳು ಭಾಗವಹಿಸಿದ್ದು, 9,495ಕ್ಕೂ ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸುವ ವ್ಯವಸ್ಥೆಯಿತ್ತು. 800ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ನೋಂದಾಯಿಸಿಕೊಂಡಿದ್ದು ಸ್ಥಳದಲ್ಲಿಯೇ 396 ಮಂದಿಗೆ ನೇಮಕಾತಿ ಆದೇಶ ಪತ್ರ ನೀಡಲಾಯಿತು.

ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಸಮಯ, ಸಮುದ್ರದ ಅಲೆಗಳು ಯಾರಿಗೂ ಕಾಯುವುದಿಲ್ಲ. ಅದೇ ರೀತಿ ಯುವಕರು ನಿರಂತರ ಪ್ರಯತ್ನ ಮಾಡಿದರೆ ಎಲ್ಲವೂ ಸಾಧ್ಯ. ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ವಾವಲಂಬಿಯಾಗಿ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು. ಕೆ.ಟಿ. ಶಾಂತಕುಮಾರ್ ಮಾತನಾಡಿ, ಕಂಪ್ಯೂಟರ್ ಯುಗದಲ್ಲಿ ಉದ್ಯೋಗಗಳು ಕಡಿಮೆಯಾಗುತ್ತವೆ ಎಂಬ ಭ್ರಮೆ ಇದ್ದರೂ, ವಾಸ್ತವದಲ್ಲಿ ತಂತ್ರಜ್ಞಾನ ಮತ್ತು ಕಂಪ್ಯೂಟರ್ ಯುಗದಲ್ಲಿ ಉದ್ಯೋಗಾವಕಾಶ ಇನ್ನಷ್ಟು ಹೆಚ್ಚಾಗಿವೆ. ಇಂದಿನ ದಿನಗಳಲ್ಲಿ ಪ್ರತಿ ಕ್ಷೇತ್ರದಲ್ಲೂ ಎಐ ಪ್ರವೇಶಿಸಿದ್ದು, ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೊಬ್ಬರಿಗೆ ಉತ್ತಮ ಬೆಲೆ ದೊರಕುವಂತೆ ಹಲವು ಹೋರಾಟಗಳನ್ನು ನಡೆಸಲಾಗಿದೆ. ಸದ್ಯ ಕೊಬ್ಬರಿಗೆ ಉತ್ತಮ ಬೆಲೆ ಇದ್ದರೂ ಕಪ್ಪು ಹುಳು, ನುಸಿ ರೋಗದಿಂದ ಇಳುವರಿ ಕಡಿಮೆಯಾಗುತ್ತಿದೆ. ಈ ಬಗ್ಗೆ ತೋಟಗಾರಿಕೆ ಇಲಾಖೆ ಗಮನಹರಿಸಿ, ಇಳುವರಿ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಅವರು ಒತ್ತಾಯಿಸಿದರು. ರಾಜ್ಯದಲ್ಲಿ ಯುವಜನತೆಗೆ ಉದ್ಯೋಗ ಕಲ್ಪಿಸುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕಂಪನಿಗಳು ರಾಜ್ಯದಿಂದ ಬೇರೆಡೆಗೆ ಸ್ಥಳಾಂತರವಾಗುತ್ತಿದೆ. ಕೆಪಿಎಸ್‌ಸಿ ಮೂಲಕ ನೇಮಕಾತಿ ಪ್ರಕ್ರಿಯೆಗಳು ಸರಿಯಾಗಿ ನಡೆಯುತ್ತಿಲ್ಲ. ಎರಡು ಲಕ್ಷಕ್ಕೂ ಹೆಚ್ಚು ಹುದ್ದೆ ಖಾಲಿ ಇದ್ದರೂ ನೇಮಕಾತಿ ನಡೆದಿಲ್ಲ ಎಂದು ದೂರಿದರು. ಆರ್ ಎಸ್‌ಎಸ್ ಜಿಲ್ಲಾ ಕಾರ್ಯವಾಹಕ ರವೀಂದ್ರ ತಗ್ಗಿನಮನಿ ಮಾತನಾಡಿ, ಜೀವನದಲ್ಲಿನ ಸಣ್ಣ ಸಣ್ಣ ವಿಷಯಗಳನ್ನು ನಿರ್ಲಕ್ಷ್ಯ ಮಾಡದೆ ಅವುಗಳಿಗೆ ಸೂಕ್ತ ಗಮನ ನೀಡಿದಾಗ ಮಾತ್ರ ದೊಡ್ಡ ವಿಚಾರಗಳತ್ತ ಗಮನಹರಿಸಲು ಸಾಧ್ಯ. ಸಣ್ಣ ವಿಷಯಗಳಲ್ಲಿ ಶಿಸ್ತು, ಜವಾಬ್ದಾರಿ ಬೆಳೆಸಿಕೊಂಡಾಗ ಸಾಧನೆಗೆ ಅನೇಕ ಅವಕಾಶಗಳು ದೊರಕುತ್ತವೆ ಎಂದು ಹೇಳಿದರು.

## ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ; ಲಿಂಗ ತಾರತಮ್ಯ ನಿವಾರಿಸಿ




• ಉದಯವಾಹಿನಿ, ಮಂಡ್ಯ

ಹೆಣ್ಣು-ಗಂಡು ಎನ್ನುವ ಭೇದ ಭಾವ ಮಾಡದೆ ಸಮಾಜದಲ್ಲಿ ಎಲ್ಲರೂ ಕೂಡ ಒಂದೇ ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮಕ್ಕೆ ಅರ್ಥ ಬರುತ್ತದೆ ಎಂದು ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ಕೆ.ಆರ್.ನಂದಿನಿ ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ, ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ ಶನಿವಾರ ನಡೆದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳ ಶಿಕ್ಷಣ, ಕೌಶಲ ಅಭಿವೃದ್ಧಿ, ಆರೋಗ್ಯ ರಕ್ಷಣೆ ಮತ್ತು ಸುರಕ್ಷತೆಗೆ ಆದ್ಯತೆ ನೀಡಬೇಕು. ಹೆಣ್ಣು ಮಗುವಿನ ಘನತೆ, ಅವಕಾಶ ಮತ್ತು ಭರವಸೆಯ ಜೀವನ ನಡೆಸುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಬಾಲ್ಯವಿವಾಹ, ಹೆಣ್ಣು ಭ್ರೂಣ ಹತ್ಯೆ ಮತ್ತು ಲಿಂಗ ಅಸಮಾನತೆಯಂತಹ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ ಎಂದರು.

ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿ, ಮಕ್ಕಳು ದೇಶದ ದೊಡ್ಡ ಸಂಪತ್ತು. ಹೆಣ್ಣು ಮಕ್ಕಳ ರಕ್ಷಣೆ ಬಹಳ ಮುಖ್ಯ. 2026ರ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯು ಇತ್ತೀಚಿನ ವರ್ಷಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣ, ಆರೋಗ್ಯ, ಲಿಂಗ ಸಮಾನತೆ ಮತ್ತು ಸಬಲೀಕರಣದ ಮೇಲೆ ಕೇಂದ್ರೀಕರಿಸಲಾಗಿದೆ. 2026ನೇ ಸಾಲಿನಲ್ಲಿ ಉಜ್ವಲ ಭವಿಷ್ಯಕ್ಕಾಗಿ ಹೆಣ್ಣುಮಕ್ಕಳನ್ನು ಸಬಲೀಕರಣಗೊಳಿಸುವುದು ಎಂಬ ಆಶಯ ಹೊಂದಲಾಗಿದೆ ಎಂದರು.

## ಚಿಂತಾಮಣಿ: ತಳಗವಾರ ಗ್ರಾ.ಪಂ ಅವ್ಯವಹಾರ ತನಿಖೆಗೆ ಆಗ್ರಹ

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ತಳಗವಾರ ಗ್ರಾಮ ಪಂಚಾಯಿತಿಯಲ್ಲಿ ಭ್ರಷ್ಟಾಚಾರ ಮತ್ತು ನಿಯಮ ಬಾಹಿರ ಚಟುವಟಿಕೆ ನಡೆಯುತ್ತಿವೆ. ಪಿಡಿಒ ಅವರನ್ನು ಅಮಾನತುಗೊಳಿಸಬೇಕೆಂದು ಆಗ್ರಹಿಸಿ ತಳಗವಾರ ಗ್ರಾಮಸ್ಥರು ಪಂಚಾಯಿತಿ ಮುಂಭಾಗ ಪ್ರತಿಭಟನೆ ನಡೆಸಿದರು. ಗ್ರಾಮೀಣ ಅಭಿವೃದ್ಧಿ ಕಾಯ್ದೆ 1973ರ ಪ್ರಕಾರ ಪ್ರತಿ 3 ವರ್ಷಕ್ಕೊಮ್ಮೆ ಗ್ರಾಮ ಪಂಚಾಯಿತಿ ಮಳಿಗೆಯನ್ನು ಬಹಿರಂಗವಾಗಿ ಹರಾಜು ಮಾಡಬೇಕು. ಆದರೆ ಇಲ್ಲಿನ ಪಿಡಿಒ ಕೆಲ ಪ್ರಭಾವಿ ಸದಸ್ಯರೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಒಂದೇ ಕುಟುಂಬಕ್ಕೆ ಮಳಿಗೆ ಮತ್ತು ಮನೆ ನೀಡಿದ್ದಾರೆ. ಮೇಲಧಿಕಾರಿಗಳ ಮತ್ತು ಶಾಸಕರ ಸೂಚನೆಗೂ ಬೆಲೆ ನೀಡದೆ ಬಹಿರಂಗ ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದ್ದಾರೆ ಎಂದು ಆರೋಪಿಸಿದರು.

ಪಂಚಾಯಿತಿಯಲ್ಲಿ ಇ-ಸ್ವತ್ತು ಮಾಡಿಕೊಡಲು ಸಾರ್ವಜನಿಕರಿಂದ 20 ರಿಂದ 30 ಸಾವಿರ ಲಂಚ ಪಡೆಯುತ್ತಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯರನ್ನೇ ಬೋಕರ್‌ಗಳನ್ನಾಗಿ ಬಳಸಿಕೊಂಡು ವಸೂಲಿ ಮಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು. ಸ್ವಚ್ಛತಾ ಪರಿಕರ ಮತ್ತು ಬೀಚಿಂಗ್ ಪೌಡರ್ ಖರೀದಿ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿದೆ. ದಾಖಲೆಯಲ್ಲಿ ಖರೀದಿ ತೋರಿಸಲಾಗಿದ್ದರೂ, ಯಾವುದೇ ಪರಿಕರ ಬಳಕೆಯಾಗಿಲ್ಲ ಎಂದು ಆರೋಪಿಸಿದರು. ಪಂಚಾಯಿತಿ ವ್ಯಾಪ್ತಿಯಲ್ಲಿ 263 ನಿವೇಶನ ರಹಿತರು ಅರ್ಜಿ ಸಲ್ಲಿಸಿದ್ದರೂ, ಲಭ್ಯವಿರುವ ಜಾಗವನ್ನು ಅರ್ಹರಿಗೆ ನೀಡದೆ ಅಕ್ರಮ ದಾಖಲೆ ಸೃಷ್ಟಿಸಿ ಪ್ರಭಾವಿಗಳಿಗೆ ಖಾತೆ ಮಾಡಿಕೊಡಲಾಗಿದೆ. ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಪಿಡಿಒ ಅವರನ್ನು ಅಮಾನತು ಮಾಡಬೇಕು. ನಿವೇಶನ ರಹಿತ ಬಡವರಿಗೆ ಕೂಡಲೇ ಜಾಗ ಹಂಚಿಕೆ ಮಾಡಬೇಕೆಂದು ಆಗ್ರಹಿಸಿದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಎಸ್.ಆನಂದ್ ಭೇಟಿ ನೀಡಿ ಮನವಿ ಸ್ವೀಕರಿಸಿದರು.

## ಗಾಜಿನಮನೆ ನವೀಕರಣಕ್ಕೆ 3 ಕೋಟಿ

• ಉದಯವಾಹಿನಿ, ತುಮಕೂರು:

ಸಾಕಷ್ಟು ಸಮಸ್ಯೆಗಳಿಗೆ ಸಿಲುಕಿದ್ದ ಅಮಾನಿಕೆರೆಯಲ್ಲಿರುವ ಗಾಜಿನ ಮನೆ ನವೀಕರಣಕ್ಕೆ 3 ಕೋಟಿ, ಅಮಾನಿಕೆರೆಯಲ್ಲಿ ಜಲಕ್ರೀಡೆ ಅಕಾಡೆಮಿ ಸ್ಥಾಪನೆ, ಊರ್ಡಿಗೆರೆ ಹೋಬಳಿ ಮಾಚನಹಳ್ಳಿಯಲ್ಲಿ ಸುಸಜ್ಜಿತ ಬಡಾವಣೆ ನಿರ್ಮಾಣ ಮಾಡಲು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ (ಟೂಡಾ) ನಿರ್ಧರಿಸಿದೆ.

2026-27ನೇ ಸಾಲಿನ ಟೂಡಾ ಬಜೆಟ್‌ನಲ್ಲಿ ಈ ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ. ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಜೆಟ್‌ಗೆ ಒಪ್ಪಿಗೆ ನೀಡಲಾಗಿದೆ. ಅಮಾನಿಕೆರೆಯಲ್ಲಿರುವ ಗಾಜಿನ ಮನೆಯಲ್ಲಿ ವರ್ಷವಿಡೀ ಒಂದಿಲ್ಲೊಂದು ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಮಳೆಗಾಲದಲ್ಲಿ ಗಾಳಿ- ಮಳೆಗೆ ಗಾಜುಗಳು ಒಡೆದುಅಸ್ತವ್ಯಸ್ತವಾಗುತ್ತಿರುತ್ತವೆ. ಪ್ರತಿಧ್ವನಿ ನಿಯಂತ್ರಣ ವ್ಯವಸ್ಥೆ ಇಲ್ಲವಾಗಿದ್ದು, ಪ್ರಸ್ತುತ ಮೀಸಲಿಟ್ಟಿರುವ 1.50 ಕೋಟಿ ಹಣ ಸಾಲುವುದಿಲ್ಲ. ಅನುದಾನದ ಮೊತ್ತ ಹೆಚ್ಚಿಸಬೇಕು ಎಂದು ಶಾಸಕ ಜಿ.ಬಿ.ಜ್ಯೋತಿಗಣೇಶ್ ಸಭೆಯಲ್ಲಿ ಸಲಹೆ ಮಾಡಿದರು. ಇದನ್ನು ಪರಿಗಣಿಸಿ 3 ಕೋಟಿ ರೂ.ಗೆ ಹೆಚ್ಚಳ ಮಾಡಿ ಅನುಮೋದನೆ ನೀಡಲಾಯಿತು.




ತುಮಕೂರು ಅಮಾನಿಕೆರೆಯಲ್ಲಿ ಕಯಾಕಿಂಗ್ ಹಾಗೂ ಕೆನೋಯಿಂಗ್ ಜಲಕ್ರೀಡಾ ಅಕಾಡೆಮಿ ಸ್ಥಾಪಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ನಗರ ರಿಂಗ್ ರಸ್ತೆಯಲ್ಲಿರುವ ದಿಟ್ಟೂರು ವೃತ್ತದಲ್ಲಿ ಅಪಘಾತ ಹೆಚ್ಚಳವಾಗಿದ್ದು, ಪೊಲೀಸರ ಸಲಹೆಯಂತೆ ಅಭಿವೃದ್ಧಿಪಡಿಸುವುದು. ಗೆದ್ದಲಹಳ್ಳಿ ಗ್ರಾಮದಲ್ಲಿ ಅಂಕಿತ ಎಜುಕೇಷನ್ ಟ್ರಸ್ಟ್‌ಗೆ ಹಂಚಿಕೆಯಾಗಿರುವ ನಾಗರಿಕ ಸೌಕರ್ಯ ನಿವೇಶನದ ಉದ್ದೇಶ ಬದಲಾವಣೆಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ನಿರ್ಧರಿಸಲಾಯಿತು.

### ಮಾಚನಹಳ್ಳಿ ಬಳಿ ಟೂಡಾ ಬಡಾವಣೆ

ತುಮಕೂರು ತಾಲ್ಲೂಕು ಊರ್ಡಿಗೆರೆ ಹೋಬಳಿ ಮಾಚನಹಳ್ಳಿ ಗ್ರಾಮದ ಬಳಿ 56 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಬಡಾವಣೆ ನಿರ್ಮಿಸಲು ಉದ್ದೇಶಿಸಲಾಗಿದೆ. ರೈತರಿಂದ ವಶಪಡಿಸಿಕೊಳ್ಳುವ ಜಮೀನಿಗೆ ಪರಿಹಾರ ಅಥವಾ 50:50 ಅನುಪಾತದ ಪಾಲುದಾರಿಕೆಯಲ್ಲಿ ಬಡಾವಣೆ ನಿರ್ಮಿಸಲಾಗುತ್ತದೆ.

# ನೆಲ್ಲೂರು ಪಾಲಾ ಆಶ್ರಮ ಶಾಲೆ ಮೇಲ್ದರ್ಜೆಗೆ: 25 ಕೋಟಿ ಅನುದಾನ

## 31 ಹಾಡಿಗಳ ಮಕ್ಕಳಿಗೆ ಒಂದೇ ಸೂರಿನಡಿ ಶಿಕ್ಷಣ ನೀಡಲು ಆಯ್ಕೆ , 12ನೇ ತರಗತಿವರಗೆ ಶಿಕ್ಷಣ ನೀಡುವ ಉದ್ದೇಶ

• ಉದಯವಾಹಿನಿ, ಹುಣಸೂರು

ಮೂಲ ಆದಿವಾಸಿ ಸಮುದಾಯದ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ ಮೈಸೂರು, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಆಯ್ದ ಆಶ್ರಮ ಶಾಲೆಗಳನ್ನು ಮೇಲ್ದರ್ಜೆಗೇರಿಸಿ 12ನೇ ತರಗತಿವರೆಗೆ ಶಿಕ್ಷಣ ನೀಡುವ ಉದ್ದೇಶ ಹೊಂದಿದೆ. ಈ ಯೋಜನೆಯಡಿ ಎಚ್.ಡಿ.ಕೋಟೆ, ಹುಣಸೂರು ತಾಲ್ಲೂಕಿನ ತಲಾ ಒಂದೊಂದು ಆಶ್ರಮ ಶಾಲೆಗಳನ್ನು ಆಯ್ಕೆ ಮಾಡಿದ್ದು, ಹುಣಸೂರು ತಾಲ್ಲೂಕಿನ ನೆಲ್ಲೂರು ಪಾಲ ಆಶ್ರಮ ಶಾಲೆಯೂ ಒಂದು. ಈ ಶಾಲೆಗಳನ್ನು 25 ಕೋಟಿ ಅನುದಾನದಲ್ಲಿ ಶಾಲೆಗಳನ್ನು ಉನ್ನತೀಕರಿಸಿ 1ರಿಂದ 12ನೇ ತರಗತಿವರೆಗೆ ಗಿರಿಜನರ ಮಕ್ಕಳಿಗೆ ಶಿಕ್ಷಣ ದೊರಕಿಸಲು ಯೋಜಿಸಲಾಗಿದೆ. ನೆಲ್ಲೂರುಪಾಲ ಆಶ್ರಮ ಶಾಲೆಯನ್ನು ಮೇಲ್ದರ್ಜೆಗೇರಿಸಿ ತಾಲ್ಲೂಕಿನ 31 ಹಾಡಿಗಳ ಮಕ್ಕಳಿಗೆ ಒಂದೇ ಸೂರಿನಡಿ ಶಿಕ್ಷಣ ನೀಡಲು ಆಯ್ಕೆ ಮಾಡಲಾಗಿದೆ. ಈ ಶಾಲೆಯಲ್ಲಿ 8ನೇ ತರಗತಿವರಗೆ 320 ವಿದ್ಯಾರ್ಥಿಗಳು ಕಲಿಯುತ್ತಿದ್ದು, 2025-26 ಸಾಲಿನಲ್ಲಿ 9ನೇ ತರಗತಿಯಲ್ಲಿ 19, 2026-27ನೇ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿ ನಂತರದಲ್ಲಿ ಪಿಯುಸಿ ವಿಭಾಗ ಆರಂಭವಾಗಲಿದೆ ಎಂದು ತಾಲ್ಲೂಕು ಪರಿಶಿಷ್ಟ ವರ್ಗಗಳ ಇಲಾಖೆ ಅಧಿಕಾರಿ ಗಂಗಾಧರ್ ಎಲ್. ತಿಳಿಸಿದರು. ದಿ.ನಿಜಲಿಂಗಪ್ಪ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ತಾಲ್ಲೂಕಿನ ಯಶೋಧಪುರ ಗ್ರಾಮದ ಯಶೋಧ ದಾಸಪ್ಪ ಅವರು ಸಮಾಜ ಕಲ್ಯಾಣ ಸಚಿವರಾಗಿದ್ದರು. ಆಗ ಗಿರಿಜನರ ಶೈಕ್ಷಣಿಕ ವ್ಯವಸ್ಥೆಗೆ ಆಶ್ರಮ ಶಾಲೆ ತೆರೆದಿದ್ದು ಅದರಲ್ಲಿ ನೆಲ್ಲೂರುಪಾಲ ಆಶ್ರಯ ಶಾಲೆಯೂ ಒಂದಾಗಿದೆ.




ಪ್ರತ್ಯೇಕ ವಸತಿ ನಿಲಯ

> ಸರ್ಕಾರ ಆಶ್ರಮ ಶಾಲೆ ಉನ್ನತೀಕರಿಸಿ ಗಿರಿಜನ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಸ್ಪಂದಿಸಿರುವುದು ನಮಗೆ ಸಹಕಾರಿ ಆಗಲಿದೆ.
>
> -ನಿಕಿತಾ 8ನೇ ತರಗತಿ ವಿದ್ಯಾರ್ಥಿನಿ ನಾಗಾಪುರ ಆಶ್ರಮ ಶಾಲೆ

**ಶೈಕ್ಷಣಿಕ ಲಾಭ:** ದುರ್ಬಲ ಬುಡಕಟ್ಟು ಸಮುದಾಯದ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ಸರ್ಕಾರ ಆರಂಭಿಸಿರುವ ಪಿಯು ಶಿಕ್ಷಣ ಗಿರಿಜನ ಮಕ್ಕಳಿಗೆ ಸಕರಾತ್ಮಕವಾಗಿದೆ. ಈ ಯೋಜನೆ ಕಟ್ಟಡ ನಿರ್ಮಾಣಕ್ಕೆ ಸೀಮಿತಗೊಳ್ಳದೆ ಗುಣಮಟ್ಟದ ಉಪನ್ಯಾಸಕರನ್ನು ನಿಯೋಜಿಸಿ ಮಕ್ಕಳಲ್ಲಿ ಓದಿನ ಪ್ರಾಮುಖ್ಯತೆ ಕುರಿತು ಜಾಗೃತಿ ಮೂಡಿಸುವಂತಾಗಬೇಕು. 8ನೇ ತರಗತಿ ನಂತರದಲ್ಲಿ ಶಾಲೆಯಿಂದ ಹೊರಗುಳಿಯುವ ಮಕ್ಕಳ ಪ್ರಮಾಣ ತಗ್ಗಿಸಲು ಸಹಕಾರಿಯಾಗುವ ನಿರೀಕ್ಷೆ ಇದೆ ಎಂದು 'ಡೀಡ್' ಸಂಸ್ಥೆ ನಿರ್ದೇಶಕ ಶ್ರೀಕಾಂತ್ ಮಾಹಿತಿ ನೀಡಿದರು.

### ನಾಯಕ ಸಮುದಾಯಕ್ಕೆ ಅನುಕೂಲ

ಗಿರಿಜನ ಮಕ್ಕಳನ್ನೇ ಕೇಂದ್ರೀಕೃತವಾಗಿ ಇಟ್ಟುಕೊಂಡು ಸರ್ಕಾರ 12ನೇ ತರಗತಿವರಗಿನ ಆಶ್ರಮ ಶಾಲೆಯನ್ನು ಹಾಡಿಗಳ ವ್ಯಾಪ್ತಿಯಲ್ಲಿ ತೆರೆದಿದ್ದರೆ ಸೋಲಿಗ ಎರವ ಬೆಟ್ಟಕುರುಬ ಜೇನುಕುರುಬ ಸಮುದಾಯದ ಮಕ್ಕಳಿಗೆ ಹೆಚ್ಚಿನ ಲಾಭವಾಗುತ್ತಿತ್ತು. ಈಗ ನಾಯಕ ಸಮುದಾಯಕ್ಕೆ ಹೆಚ್ಚಿನ ಲಾಭ ಸಿಗಲಿದೆ.


-ಎಸ್.ಶ್ರೀಕಾಂತ್ ಡೀಡ್ ಸಂಸ್ಥೆ ನಿರ್ದೇಶಕ

**ಏನೇನು ಇರಲಿವೆ ?:** ಈ ಶಾಲೆ ಮೇಲ್ದರ್ಜೆಗೇರಿದ ಬಳಿಕ 12 ಸಿಬ್ಬಂದಿ ವಸತಿಗೃಹ ಕೌಂಪೌಂಡ್ ಒಳ, ಹೊರಾಂಗಣ ಕ್ರೀಡಾಂಗಣ ಹೆಚ್ಚುವರಿ 5 ಕೊಠಡಿಗಳು ಕುಡಿಯುವ ನೀರಿನ ವ್ಯವಸ್ಥೆ 200 ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ನಿಲಯ ಸೋಪಾನಕಟ್ಟೆ ಹೈಟೆಕ್ ಶೌಚಾಲಯ ಇ-ಶಿಕ್ಷಣ ಉದ್ಯಾನ ಇರಲಿವೆ.

ಅಂತರಾಳದಿಂದ...
EDITORIAL

# ಇದೆಂತಹ ಪರಿಷ್ಕರಣೆ?


ಬಿಹಾರದಲ್ಲಿ ಆತುರಾತುರವಾಗಿ ಅನುಷ್ಠಾನಗೊಂಡ ದಿನಗಳಿಂದ ಮತದಾರರ ಪಟ್ಟಿಗಳ ತೀವ್ರ ಪರಿಷ್ಕರಣೆ(ಎಸ್ ಐಆರ್) ಬೇರೆ ಬೇರೆ ಕಾರಣಗಳಿಗಾಗಿ ಟೀಕೆಗೊಳಗಾಗುತ್ತಿದೆ. ಎನ್‌ಆರ್‌ಸಿಯು ಹೊಸ ಮುಖವಾಡದಲ್ಲಿ ಮತ್ತೆ ಜನರ ನಡುವೆ ಬಂದಿದೆ ಎಂಬ ಗಂಭೀರ ಆರೋಪವು ಅದರ ಮೇಲಿದೆ. ಎನ್‌ಆರ್‌ಸಿಯನ್ನು ದೇಶಾದ್ಯಂತ ಜಾರಿಗೊಳಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಎಸ್‌ಐಆರ್ ಮೂಲಕ ಕೇಂದ್ರ ಸರಕಾರ ಜನರ ಪೌರತ್ವದ ತನಿಖೆಗಿಳಿದಿದೆ ಎನ್ನಲಾಗುತ್ತಿದೆ. ಮಾತ್ರವಲ್ಲ ತಳಸ್ತರದ ಕೋಟ್ಯಂತರ ಜನರನ್ನು ಮತದಾನದಿಂದ ಹೊರಗಿಡುವುದಕ್ಕಾಗಿಯೇ ಈ ಪರಿಷ್ಕರಣೆಯನ್ನು ಆರಂಭಿಸಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಅದನ್ನು ಪುಷ್ಟೀಕರಿಸುವಂತೆ ಈಗಾಗಲೇ ಈ ದೇಶದ ಕೋಟ್ಯಂತರ ಮತದಾರರು ಮತದಾರರ ಪಟ್ಟಿಯಿಂದ ಹೊರ ಬಿದ್ದಿದ್ದಾರೆ. ಹೊರ ಬಿದ್ದವರಲ್ಲಿ ದೊಡ್ಡ ಸಂಖ್ಯೆಯಲ್ಲಿರುವುದು ಬಡವರು, ಶೋಷಿತ ಸಮುದಾಯದ ಜನರು ಮತ್ತು ವಲಸೆ ಕಾರ್ಮಿಕರು. ಮತದಾರರ ಪಟ್ಟಿ ಪರಿಷ್ಕರಣೆಯ ಸಂದರ್ಭದಲ್ಲಿ ಕೆಲವು ನಿರ್ದಿಷ್ಟ ಸಮುದಾಯದ ಜನರನ್ನು ಪಟ್ಟಿಯಿಂದ ಹೊರಗಿಡುವುದಕ್ಕಾಗಿ ಬಿಜೆಪಿ ಮತ್ತು ಆರೆಸ್ಸೆಸ್ ದೊಡ್ಡ ಮಟ್ಟದ ಸಂಚು ನಡೆಸುತ್ತಿದೆ ಎನ್ನುವ ಆರೋಪಗಳೂ ಕೇಳಿ ಬರುತ್ತಿವೆ. ಹೇಗೆ ಈ ದೇಶದಲ್ಲಿ ದ್ವೇಷ ರಾಜಕಾರಣಕ್ಕಾಗಿ ಮತಾಂತರ ಕಾಯ್ದೆ ಮತ್ತು ಜಾನುವಾರು ಮಾರಾಟ ನಿಷೇಧ ಕಾಯ್ದೆಗಳು ದುರ್ಬಳಕೆಯಾಗುತ್ತಿವೆಯೋ ಅದಕ್ಕಿಂತ ಭೀಕರ ರೀತಿಯಲ್ಲಿ ಎಸ್‌ಐಆರ್‌ನ್ನು ದುರುಪಯೋಗಗೊಳಿಸಲು ರಾಜಕಾರಣಿಗಳು ಪ್ರಯತ್ನಿಸುತ್ತಿದ್ದಾರೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಇತ್ತೀಚೆಗೆ ನೀಡಿರುವ ಬಹಿರಂಗ ಹೇಳಿಕೆ ಅದನ್ನು ಪುಷ್ಟೀಕರಿಸುತ್ತದೆ. ಅಸ್ಸಾಮಿನಲ್ಲಿ ಎಸ್‌ಐಆರ್‌ನ್ನು ನಡೆಸುವುದೇ ಬಂಗಾಳಿ ಮಾತನಾಡುವ ಮುಸ್ಲಿಮರನ್ನು ಅಂದರೆ ಮಿಯಾಗಳನ್ನು ಮತದಾರರ ಪಟ್ಟಿಯಿಂದ ಹೊರಗಿಡುವುದಕ್ಕೆ ಎಂದು ಅವರು ಘೋಷಿಸಿದ್ದಾರೆ. ಮಾತ್ರವಲ್ಲ, ಎಸ್‌ಐಆರ್‌ನಲ್ಲಿರುವ ಸುಮಾರು ಐದು ಲಕ್ಷ ಮತದಾರರ ಹೆಸರುಗಳನ್ನು ಅಳಿಸಲಾಗುವುದು ಎನ್ನುವ ಬೆದರಿಕೆಯನ್ನು ಅವರು ಒಡ್ಡಿದ್ದಾರೆ. ಎಸ್‌ಐಆರ್‌ನ ಉದ್ದೇಶ ನಕಲಿ ಮತದಾರರನ್ನು ಪಟ್ಟಿಯಿಂದ ಕಿತ್ತು ಹಾಕುವುದು ಎನ್ನುವ ಚುನಾವಣಾ ಆಯೋಗದ ಹೇಳಿಕೆಯನ್ನು ಶರ್ಮಾ ಹೇಳಿಕೆ ಸಂಪೂರ್ಣ ಅಲ್ಲಗಳೆಯುತ್ತದೆ. ಅವರ ಪ್ರಕಾರ ಎಸ್‌ಐಆರ್‌ನ್ನು ಜಾರಿಗೊಳಿಸಿರುವುದು ಒಂದು ನಿರ್ದಿಷ್ಟ ಸಮುದಾಯದ ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಹೊರಗಿಡುವುದಕ್ಕಾಗಿ. ಈ ಮಾತುಗಳನ್ನು ಯಾವುದೋ ರಾಜಕೀಯ ಮುಖಂಡ ಆಡಿದ್ದರೆ ಅವರ ಮೇಲೆ ದ್ವೇಷ ಭಾಷಣದ ದೂರುಗಳನ್ನು ದಾಖಲಿಸಿ ಸುಮ್ಮನಿರಬಹುದು.




ಆದರೆ ಒಂದು ರಾಜ್ಯದ ಮುಖ್ಯಮಂತ್ರಿಯೇ ಸಾರ್ವಜನಿಕವಾಗಿ ಈ ಹೇಳಿಕೆಯನ್ನು ನೀಡಿದ್ದಾರೆ ಮತ್ತು ಹಲವು ವೇದಿಕೆಗಳಲ್ಲಿ ಅದನ್ನು ಸಮರ್ಥಿಸಿಕೊಂಡಿದ್ದಾರೆ. ಅಂದರೆ, ಸರಿಯಾದ ದಾಖಲೆಗಳು ಇದ್ದರೂ ಒಂದು ನಿರ್ದಿಷ್ಟ ಸಮುದಾಯದ ಮತದಾರರನ್ನು ಪಟ್ಟಿಯಿಂದ ಕಿತ್ತು ಹಾಕಲಿದ್ದೇವೆ ಎನ್ನುವುದು ಇದರ ಅರ್ಥ. ಇದಕ್ಕೆ ಚುನಾವಣಾ ಆಯೋಗ ಅವಕಾಶ ಮಾಡಿಕೊಡುತ್ತದೆಯೆ ವಿಪರ್ಯಾಸವೆಂದರೆ, ಅಸ್ಸಾಂ ಮುಖ್ಯಮಂತ್ರಿ ಇಂತಹದೊಂದು ಹೇಳಿಕೆಯನ್ನು ಎರಡೆರಡು ಬಾರಿ ನೀಡಿದಾಗಲೂ ಇದರ ವಿರುದ್ಧ ಚುನಾವಣಾ ಆಯೋಗ ತುಟಿ ಬಿಚ್ಚಿಲ್ಲ. ಅಂದರೆ ಮುಖ್ಯಮಂತ್ರಿಯ ಮಾತುಗಳನ್ನು ಚುನಾವಣಾ ಆಯೋಗ ಸಮರ್ಥಿಸುತ್ತದೆ ಎಂದಾಯಿತಲ್ಲವೆ ಎನ್‌ಆರ್‌ಸಿ ಜಾರಿಗೊಂಡ ಏಕೈಕ ರಾಜ್ಯ ಅಸ್ಸಾಂ. ಎನ್‌ಆರ್‌ಸಿ ಹೆಸರಿನಲ್ಲಿ ಅಸ್ಸಾಮಿನಲ್ಲಿ ಏನೆಲ್ಲ ನಡೆಯಿತು ಎನ್ನುವುದನ್ನು ಇಡೀ ದೇಶ ನೋಡಿದೆ. ಸುಮಾರು 20 ಲಕ್ಷ ಮಂದಿ ಎನ್‌ಆರ್‌ಸಿ ಹೆಸರಿನಲ್ಲಿ ತಮ್ಮ ಪೌರತ್ವವನ್ನು ಕಳೆದುಕೊಂಡರು. ದೇಶಕ್ಕಾಗಿ ಹೋರಾಡಿದ ಯೋಧರು, ನಿವೃತ್ತ ಯೋಧರ ಹೆಸರುಗಳೂ ಇದರಲ್ಲಿ ಸೇರಿಕೊಂಡಿತ್ತು. ಕಾರಣ ಅವರು ಮುಸ್ಲಿಮರು ಎನ್ನುವುದಷ್ಟೇ ಆಗಿತ್ತು. ಕಾರ್ಗಿಲ್‌ನಲ್ಲಿ ಹೋರಾಡಿದ ಯೋಧನೂ ಬಂಧನಕೇಂದ್ರ ಸೇರಬೇಕಾದ ಸ್ಥಿತಿ ನಿರ್ಮಾಣವಾಯಿತು. ನೆರೆ ಮೊದಲಾದ ಪ್ರಕೃತಿ ವಿಕೋಪಗಳಿಂದ ತಮ್ಮ ದಾಖಲೆಗಳನ್ನು ಕಳೆದುಕೊಂಡ ಕುಟುಂಬಸ್ಥರು ದಿಗಂಧನ ಕೇಂದ್ರದಲ್ಲಿ ಕಳೆದರು. ಹಲವರು ಅಲ್ಲೇ ಪ್ರಾಣವನ್ನೂ ಕಳೆದುಕೊಂಡರು. ಹಲವು ವರ್ಷ ದಿಗ್ಬಂಧನದಲ್ಲಿ ಕಳೆದ ಬಳಿಕ ಪೌರತ್ವ ಸಾಬೀತಾದವರೂ ಇದ್ದಾರೆ. ಇದೀಗ ಅಸ್ಸಾಮಿನಲ್ಲಿ ಹೊಸತೊಂದು ಎನ್‌ಆರ್‌ಸಿ ಆರಂಭವಾಗಿದೆ ಮತ್ತು ಪರಿಷ್ಕರಣೆಗೆ ಮೊದಲೇ ಯಾರು ಅರ್ಹ ಮತದಾರರು ಮತ್ತು ಅನರ್ಹ ಮತದಾರರು ಎನ್ನುವುದನ್ನು ಘೋಷಿಸಲಾಗಿದೆ. ಮುಖ್ಯಮಂತ್ರಿಯವರೇ ಯಾರು ಅರ್ಹ ಮತದಾರರು ಎನ್ನುವುದನ್ನು ಘೋಷಿಸಿದ ಮೇಲೆ, ಇನ್ನು ಅನಗತ್ಯವಾಗಿ ಎಸ್‌ಐಆರ್ ಎನ್ನುವ ಪ್ರಹಸನವನ್ನು ನಡೆಸುವ ಅಗತ್ಯವೇನಿದೆ ಎಂದು ಜನರು ಕೇಳುವಂತಾಗಿದೆ.

ಇದು ಕೇವಲ ಅಸ್ಸಾಮಿಗಷ್ಟೇ ಸೀಮಿತವಾಗಿಲ್ಲ. ಎಸ್‌ಐಆರ್ ಸಿಬ್ಬಂದಿಗೆ ನಿರ್ದಿಷ್ಟ ಸಮುದಾಯದ ಜನರ ಹೆಸರುಗಳನ್ನು ಅಳಿಸುವುದಕ್ಕಾಗಿ ಒತ್ತಡಗಳನ್ನು ಹೇರಲಾಗುತ್ತಿದೆ ಎನ್ನುವ ಆರೋಪ ವಿವಿಧ ರಾಜ್ಯಗಳಿಂದ ಕೇಳಿ ಬರುತ್ತಿದೆ. ರಾಜಸ್ಥಾನದಲ್ಲಿ ಈ ಒತ್ತಡಕ್ಕೆ ಹೆದರಿದ ಬಿಎಲ್‌ಒ ಒಬ್ಬರು ಆತ್ಮಹತ್ಯೆಗೆ ಮುಂದಾಗಿದ್ದರು. ತನ್ನ ಮತಗಟ್ಟೆಯ 470 ಮತದಾರರ ಹೆಸರುಗಳನ್ನು ಅಳಿಸುವಂತೆ ಬಿಜೆಪಿ ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸುವಂತೆ ತನಗೆ ಬೆದರಿಕೆಯೊಡ್ಡಲಾಗುತ್ತಿದೆ' ಎಂದು ಜೈಪುರದ ಹವಾ ಮಹಲ್ ವಿಧಾನಸಭಾ ಕ್ಷೇತ್ರದ ಬಿಎಲ್‌ಒ ಕೀರ್ತಿಕುಮಾರ್ ಎಂಬವರು ಆರೋಪಿಸಿದ್ದರು ಮಾತ್ರವಲ್ಲ, ಈ ಒತ್ತಡ ತೀವ್ರವಾದರೆ ನಾನು ಜಿಲ್ಲಾಧಿಕಾರಿ ಕಚೇರಿಯ ಮುಂದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ದೂರವಾಣಿಯಲ್ಲಿ ಕೂಗಾಡುವ ಅವರ ವೀಡಿಯೊ ವೈರಲ್ ಆಗಿತ್ತು. ಈ ಎಲ್ಲಾ ಮತದಾರರು ಮುಸ್ಲಿಮ್ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಎನ್ನುವುದು ಗಮನಾರ್ಹವಾಗಿದೆ. ಗುಜರಾತಿನಲ್ಲಿ ಅಂತರ್‌ರಾಷ್ಟ್ರೀಯ ಖ್ಯಾತಿಯ ಡೋಲಕ್ ವಾದಕ ಮೀರ್ ಹಾಜಿ ಕಸಮ್ ಅವರನ್ನೇ ಪಟ್ಟಿಯಿಂದ ಹೊರಗಿಡುವ ಪ್ರಯತ್ನ ನಡೆಯಿತು.

## ರಾಮಾಯಣ



### ತಾರಾದೇವಿಯ ರೋದನ

• ಹಿಂದಿನ ಸಂಚಿಕೆಯಿಂದ **120ನೆಯ ಅಧ್ಯಾಯ**

ಬಿರುಗಾಳಿಯಿಂದ ಬೇರುಸಹಿತವಾಗಿ ಬಿದ್ದ ವೃಕ್ಷದಂತೆ, ರಾಮಬಾಣದಿಂದ ರಣರಂಗದಲ್ಲಿ ಬಿದ್ದಿದ್ದ ವಾಲಿಯನ್ನು ಕಂಡು ತಾರಾದೇವಿಯು ಅತ್ಯಂತ ದುಃಖಾಕ್ರಾಂತೆಯಾಗಿ ಹಂಬಲಿಸ ತೊಡಗಿದಳು: '' ಪ್ರಾಣಕಾಂತ, ನಿನ್ನ ಮುಂದುಗಡೆಯಲ್ಲಿರುವ ನನ್ನೊಡನೆ ಏಕೆ ಮಾತನಾಡ ದಿದ್ದೀಯೆ? ನಿನ್ನಂಥ ದೊರೆಗಳು ಹೀಗೆ ಭೂಶಯನಮಾಡುವುದು ಉಚಿತವ ? ಮಂಚದ ಮೇಲೆ ಮಲಗಬಾರದೆ? ಅಕಟಕಟಾ ನಿನಗೆ ಈ ಭೂದೇವಿಯು ನನಗಿಂತಲೂ ಅತಿ ಪ್ರಿಯಳಾದಳೆ ? ಪ್ರಾಣಹೋಗುವ ಸಮಯದಲ್ಲಿ ನಿನ್ನ ಪ್ರಿಯಳಾದ ನನ್ನನ್ನು ಬಿಟ್ಟು ಭೂದೇವಿಯನ್ನು ಬಿಡದೆ ಆಕೆಯಮೇಲೆ ಕೈನೀಡಿಕೊಂಡು ಮಲಗಿದ್ದೀಯೆ. ಅಯ್ಯೋ! ಇಲ್ಲಿ ಗಾಯಪಡದು ಬಿದ್ದಿರುವ. ನನ್ನನ್ನು ಕಂಡು ನನ್ನ ಎದೆಯು ಅನೇಕ ಭಾಗಗಳಾಗಿ ಒಡೆಯದಿರುವುದರಿಂದ ಅದು ಕಲ್ಲೆದೆಯಾಗಿರಬೇಕು. ಹೇ ವೀರ ಧರ್ಮಮಾರ್ಗಪ್ರವರ್ತಕನಾದ ನಿನ್ನಿಂದ ಕಿಷ್ಕಿಂಧೆಯಂತೆ ರಮ್ಯವಾಗಿರುವ ಮತ್ತೊಂದು ಪಟ್ಟಣವು ಸ್ವರ್ಗಮಾರ್ಗದಲ್ಲಿ ನಿರ್ಮಿತವಾಗಿರಬೇಕು. ಅತ್ಯಂತ ಪರಿಮಳಪ್ರಪ್ಪಗಳುಳ್ಳ ಉದ್ಯಾನವನಗಳಲ್ಲಿ ಅನುಭವಿಸಿಕೊಂಡಿದ್ದ ಭೋಗಗಳು ಈಗ ತೀರಿ ಹೋದವೆ? ನಾನು ನಿರಾಶೆಯಿಂದ ಸಂತೋಷಗುಂದಿ ಶೋಕವೆಂಬ ಸಮುದ್ರದಲ್ಲಿ ಮುಳುಗಿ ಹೋದೆನು. ವಾನರೇಂದ್ರ, ನೀನು ಸುಗ್ರೀವನ ಸ್ತ್ರೀಯನ್ನು ಅಪಹರಿಸಲು ಆತನು ನಿನ್ನನ್ನು ಈ ಭೂಲೋಕದಿಂದ ಹೊರಡಿಸಿದನು. ಈ ವಿಪತ್ತನ್ನು ನೀನೇ ತಂದುಕೊಂಡೆ ! ನಿನ್ನಿಂದ ಶ್ರೇಯಸ್ಸನ್ನು ಪಡೆಯಬೇಕೆಂದಿದ್ದ ನಾನು ಇಂದು ಹತಾಶಳಾದೆನು. ನಾನು ಯಾವಾಗಲೂ ನಿನಗೆ ಹಿತವನ್ನೇ ಬಯಸಿ ನಿನಗೆ ಹಿತವಾದ ಮಾತುಗಳನ್ನೇ ಆಡುತ್ತಿದ್ದೆವು. ರೂಪಯೌವನಗಳಿಂದ ಹೆಮ್ಮೆಗೊಂಡಿರುವ ಅಪ್ಸರೆಯರ ಚಿತ್ತವನ್ನು ನಿನ್ನ ಸೌಂದರ್ಯವು ಕಡೆಯಬಲ್ಲದು. ನೀನು ನನ್ನ ಮಾತನ್ನು ಕೇಳದೆ ಸುಗ್ರೀವನೊಡನೆ ಯುದ್ಧಕ್ಕೆ ಹೊರಟಾಗಲೆ ನಿನಗೆ ಕೊನೆಗಾಲ ಸಮೀಪಿಸಿತೆಂದು ತಿಳಿದೆನು. ಸುಕುಮಾರನೂ ಸುಖೋಚಿತನೂ ಆದ ಈ ಅಂಗದಕುಮಾರನು ಇನ್ನುಮೇಲೆ, ಕ್ರುದ್ಧನಾಗಿರುವ ಚಿಕ್ಕಪ್ಪನ ಬಳಿ ಯಾವ ಅವಸ್ಥೆಯನ್ನು ಪಡೆಯುವನೊ! ಹೇ ಮಗು, ಅಂಗದ, ನಿನ್ನ ತಂದೆಯನ್ನು ಚೆನ್ನಾಗಿ ನೋಡು. ಇನ್ನು ಮುಂದೆ ಇವನನ್ನು ನೀನು ಕಾಣಲಾರೆ. ಹೇ ಪ್ರಾಣನಾಥ, ನಿನ್ನ ಪ್ರಿಯಪುತ್ರನಾದ ಅಂಗದನು ಬಂದಿದ್ದಾನಲ್ಲ ಅವನನ್ನು ಏಕೆ ಮಾತನಾಡಿಸುವುದಿಲ್ಲ? ಶ್ರೀರಾಮನು ನಿನ್ನನ್ನು ಕೊಂದು ಮಹತ್ತರವಾದ ಅಕೃತ್ಯವನ್ನು ಮಾಡಿದನು. ಸುಗ್ರೀವನಿಗೆ ನಂಬಿಕೆಯನ್ನು ಕೊಟ್ಟು ಆತನ ಕಾರ್ಯವನ್ನು ಸಾಧಿಸಿ ಆತನ ಋಣವನ್ನು ತೀರಿಸಿಕೊಂಡನು. ಎಲೈ ಸುಗ್ರೀವ, ನಿನ್ನ ಮನೋರಥವು ಸಂದಿತಲ್ಲವೆ? ನಿನ್ನ ಸ್ತ್ರೀಯಾದ ರುಮೆಯನ್ನು ಸಾಧಿಸಿಕೊಂಡೆಯಲ್ಲವೆ ? ನಿನ್ನ ಶತ್ರುವಾದ ಅಣ್ಣನನ್ನು ಕೊಂದದ್ದರಿಂದ ಇನ್ನುಮೇಲೆ ನೀನು ಮುನಸ್ಸಿನ ವ್ಯಥೆಯನ್ನು ಬಿಟ್ಟು ರಾಜ್ಯಭೋಗವನ್ನನುಭವಿಸು. ಹೇ ವಾನರೇಶ್ವರ, ಈ ರೀತಿ ಹಂಬಲಿಸುತ್ತಿರುವ ನನ್ನನ್ನು ಯಾವ ಕಾರಣ ಮಾತನಾಡಿಸದಿದ್ದೀಯೆ? ಇಗೋ, ನಿನ್ನ ಸ್ತ್ರೀಯರೆಲ್ಲರೂ ಬಂದಿದ್ದಾರೆ. ಇವರನ್ನು ಯಾವ ಕಾರಣ ಕಣ್ಣುತೆರೆದು ನೋಡದಿದ್ದೀಯೆ ? ' ಎಂದು ಗೋಳಾಡಿದಳು. ಆಗ ತಾರಾದೇವಿಯ ಹಂಬಲಿಕೆಯನ್ನು ಕೇಳಿ ವಾನರಸ್ತೀಯರೆಲ್ಲರೂ ಅತ್ಯಂತ ದುಃಖಾ ಕ್ರಾಂತೆಯರಾಗಿ ಅಂಗದಕುಮಾರನನ್ನು ತಬ್ಬಿಕೊಂಡು ರೋದನಮಾಡತೊಡಗಿದರು. ಪುನಃ ತಾರಾದೇವಿಯು ತನ್ನ ಪತಿಯಾದ ವಾಲಿಯನ್ನು ನೋಡುತ್ತ ಪ್ರಾಣಕಾಂತ, ಅಂಗದಕುಮಾರನನ್ನು ಬಿಟ್ಟು ನೀನು ಯಾವ ಕಾರಣ ದೂರಯಾತ್ರೆ ಹೊರಟೆ? ವಾನರೇಂದ್ರ, ನೀನು ನಿನ್ನ ಮಗನಲ್ಲಿ ಅತ್ಯಂತ ವ್ಯಾಮೋಹವುಳ್ಳವನು.

ಮುಂದುವರಿಯುವುದು...

**ಅಧಿಕ ಯೂರಿಕ್ ಆಮ್ಲದ ಮಟ್ಟಕ್ಕೆ ಎಲ್ಲಾ ಬಗೆಯ ದ್ವಿದಳ ಧಾನ್ಯಗಳನ್ನು ಅಥವಾ ಬೇಳೆಕಾಳುಗಳನ್ನು ಬಿಟ್ಟುಬಿಡುವ ಅವಶ್ಯಕತೆ ಇಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಏನೆಂದರೆ ದ್ವಿದಳ ಧಾನ್ಯಗಳಲ್ಲಿರುವ ಪ್ಯೂರಿನ್ ಅಂಶ. ಪ್ಯೂರಿನ್‌ಗಳು ವಿಭಜನೆಯಾಗಿ ಯೂರಿಕ್ ಆಮ್ಲವನ್ನು ರೂಪಿಸುತ್ತವೆ.ಹೀಗಾಗಿ ಬೇಳೆಕಾಳುಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಕೆಲವೊಂದು ವಿಚಾರವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು**

# ಅಡುಗೆಗೆ ಬಳಸುವ ಕೆಲವೊಂದು ಬೇಳೆಕಾಳುಗಳೇ ಯೂರಿಕ್ ಆಸಿಡ್ ಹೆಚ್ಚಿಸುತ್ತೆ! ತಿನ್ನೋಕು ಮುನ್ನ ಯೋಚಿಸಿ!

**ಆರೋಗ್ಯಕರವಾದ ದಾಲ್ ಯಾವುದು?**
**ಹಳದಿ ಹೆಸರು ಕಾಳುಗಳು (ಹೆಸರು ಬೇಳೆ) ಕಡಿಮೆ ಪ್ಯೂರಿನ್ ಅಂಶವನ್ನು ಹೊಂದಿದ್ದು, 25 ರಿಂದ 35 ಮಿಗ್ರಾಂ ಪ್ಯೂರಿನ್ ಅನ್ನು ಹೊಂದಿರುತ್ತವೆ. ಅವುಗಳನ್ನು ಪ್ರತಿದಿನ ಸೀಮಿತ ಪ್ರಮಾಣದಲ್ಲಿ ಸೇವಿಸಬಹುದು, ಇದು ಹೆಚ್ಚಿನ ಯೂರಿಕ್ ಆಮ್ಲದ ಮಟ್ಟವನ್ನು ಹೊಂದಿರುವವರಿಗೆ ಸುರಕ್ಷಿತವಾಗಿದೆ.**

ಸಮತೋಲನ ಆಹಾರ ಪದ್ಧತಿಯಲ್ಲಿ ಕಾಳುಗಳಿಗೆ ಹಾಗೂ ಬೇಳೆಗಳಿಗೆ ವಿಶೇಷವಾದ ಸ್ಥಾನಮಾನವಿದೆ. ದೈನಂದಿನ ಆಹಾರಪದ್ಧತಿಯಲ್ಲಿ ಯಾವು ದಾದರೂ ಒಂದು ರೂಪದಲ್ಲಿ ಆದರೂ ಬೇಳೆಕಾಳುಗಳನ್ನು ಬಳಸುತ್ತೇವೆ. ಇನ್ನು ಆರೋಗ್ಯದ ದೃಷ್ಟಿಯಿಂದ ನೋಡಿದರೂ ಕೂಡ ಬೇಳೆಕಾಳುಗಳಿಂದ ಮನುಷ್ಯನ ದೇಹದ ಆರೋಗ್ಯಕ್ಕೆ ಸಿಗುವ ಪೋಷಕಾಂಶಗಳ ಪ್ರಮಾಣ ತುಂಬಾ ಹೆಚ್ಚಾಗಿರುತ್ತದೆ. ಪ್ರಮುಖವಾಗಿ ಬೇಳೆಕಾಳುಗಳಲ್ಲಿ ಮನುಷ್ಯನ ಆರೋಗ್ಯಕ್ಕೆ ಬೇಕಾಗುವ ಎಲ್ಲಾ ಬಗೆಯ ಪೌಷ್ಟಿಕ ಸತ್ವಗಳಾದ ಹಲವಾರು ಬಗಯ ವಿಟಮಿನ್ಸ್, ನಾರಿನಾಂಶ, ಪ್ರೋಟೀನ್, ವಿವಿಧ ಬಗೆಯ ವಿಟಮಿನ್ಸ್ ಮತ್ತು ಖನಿಜಾಂಶಗಳು ಕಂಡು ಬರುತ್ತದೆ. ಅದರೆ ಯೂರಿಕ್ ಆಮ್ಲ ಅಂದರೆ ಯೂರಿಕ್ ಆಸಿಡ್ ಸಮಸ್ಯೆ ಇರುವವರು ಬೇಳೆಕಾಳುಗಳನ್ನು ಸೇವನೆ ಮಾಡಬಹುದಾ? ಎನ್ನುವ ಪ್ರಶ್ನೆ ಹಲವರಿಗಿದೆ,

**ಅಧಿಕ ಯೂರಿಕ್ ಆಸಿಡ್ ಸಮಸ್ಯೆಯಿಂದ ಬಳಲುವ ಜನರಿಗೆ ಬೇಳೆಕಾಳು ಒಳ್ಳೆಯದೇ?:** ಸಾಮಾನ್ಯವಾಗಿ ಅಧಿಕ ಯೂರಿಕ್‌ಆಸಿಡ್ ಸಮಸ್ಯೆಯಿಂದ ಬಳಲುವ ಜನರು, ಎಲ್ಲಾ ಬಗೆಯ ದ್ವಿದಳ ಧಾನ್ಯಗಳು ಅಂದರೆ ಬೇಳೆಕಾಳುಗಳು ಹಾನಿಕಾರಕ ಎಂದು ಭಾವಿಸುತ್ತಾರೆ. ಆದರೆ ಆರೋಗ್ಯ ತಜ್ಞರು ಮಾತ್ರ ಇದನ್ನು ಒಪ್ಪುವುದಿಲ್ಲ. ಸರಿಯಾದ ದ್ವಿದಳ ಧಾನ್ಯಗಳನ್ನು ಸರಿಯಾದ ಪ್ರಮಾಣದಲ್ಲಿ ಆರಿಸಿದರೆ, ದ್ವಿದಳ ಧಾನ್ಯಗಳನ್ನು ಸಂಪೂರ್ಣವಾಗಿ ತ್ಯಜಿಸದೆ ಆಹಾರವನ್ನು ನಿರ್ವಹಿಸಬಹುದು ಎಂದು ಆಹಾರ ತಜ್ಞರು ಹೇಳುತ್ತಾರೆ. ಯೂರಿಕ್ ಆಮ್ಲವು ದೇಹದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಉತ್ಪನ್ನವಾಗಿದ್ದು, ಇದು ಮೂತ್ರಪಿಂಡಗಳ ಮೂಲಕ ಹೊರಹಾಕಲ್ಪಡುತ್ತದೆ. ದೇಹದಲ್ಲಿ ಯೂರಿಕ್ ಆಮ್ಲವು ಅಧಿಕವಾಗಿ ಉತ್ಪತ್ತಿಯಾಗಲು ಪ್ರಾರಂಭಿಸಿದಾಗ ಅಥವಾ ಮೂತ್ರ ಪಿಂಡಗಳು ಅದನ್ನು ಸರಿಯಾಗಿ ಹೊರಹಾಕಲು ಸಾಧ್ಯವಾಗದಿದ್ದಾಗ, ಅದರ ಪ್ರಮಾಣವು ಹೆಚ್ಚಾಗುತ್ತದೆ. ಇದನ್ನು ಹೈಪರ್ಯುರಿಸೆಮಿಯಾ ಎಂದು ಕರೆಯಲಾಗುತ್ತದೆ, ಇದು ಕೀಲು ನೋವು, ಗೌಟ್ ಮತ್ತು ಮೂತ್ರಪಿಂಡದ ಕಲ್ಲುಗಳಂತಹ ಸಮಸ್ಯೆಗಳನ್ನು ಉಂಟುಮಾಡಬಹುದು.

**ಎಲ್ಲಾ ರೀತಿಯ ದ್ವಿದಳ ಧಾನ್ಯಗಳು ಅಪಾಯಕಾರಿಯೇ?:** ಆಹಾರ ತಜ್ಞರ ಪ್ರಕಾರ, ಅಧಿಕ ಯೂರಿಕ್ ಅಸಿಡ್ ಸಮಸ್ಯೆಯಿಂದ ಬಳಲುತ್ತಿರು ವವರು ಎಲ್ಲಾ ಬಗೆಯ ದ್ವಿದಳ ಧಾನ್ಯಗಳನ್ನು, ಬೇಳೆಕಾಳುಗಳಿಂದ ದೂರವಿರುವ ಅಗತ್ಯವಿಲ್ಲ. ಮುಖ್ಯವಾದುದು ದ್ವಿದಳ ಧಾನ್ಯಗಳ ಪ್ಯೂರಿನ್ ಅಂಶ. ಪ್ಯೂರಿನ್‌ಗಳು ಯೂರಿಕ್ ಆಮ್ಲವನ್ನು ರೂಪಿಸಲು ಒಡೆಯುತ್ತವೆ, ಆದ್ದರಿಂದ ಪ್ಯೂರಿನ್ ಅಂಶವಿರುವ ಹೆಚ್ಚಿನ ಆಹಾರಗಳು ಹಾನಿಕಾರಕವಾಗಬಹುದು. ವ್ಯಕ್ತಿಯ ಯೂರಿಕ್ ಆಮ್ಲದ ಮಟ್ಟವು ತುಂಬಾ ಹೆಚ್ಚಿದ್ದರೆ, ಅಂದರೆ, 8 mg/dL ಗಿಂತ ಹೆಚ್ಚಿದ್ದರೆ, ಅವರು ತೀವ್ರ ಎಚ್ಚರಿಕೆ ವಹಿಸಬೇಕು ಮತ್ತು ಕಡಿಮೆ ಪ್ಯೂರಿನ್ ಆಹಾರವನ್ನು ಮಾತ್ರ ಸೇವಿಸಬೇಕು ಎಂದು ಆಹಾರ ತಜ್ಞರು ಸಲಹೆ ನೀಡುತ್ತಾರೆ.

**ಯಾವ ಬಗೆಯ ದ್ವಿದಳ ಧಾನ್ಯಗಳಿಂದ ದೂರ ಇರಬೇಕು?:** ಕಡಲೆ, ಬೀನ್ಸ್ ಮತ್ತು ಕಾಳುಗಳಲ್ಲಿ ಪ್ಯೂರಿನ್ ಅಂಶವು 75 ರಿಂದ 90 ಮಿಗ್ರಾಂ ವರೆಗೆ ಇರುತ್ತದೆ. ಪ್ರತಿ 10 ರಿಂದ 15 ದಿನಗಳಿಗೊಮ್ಮೆ ಮಾತ್ರ ಅವುಗಳನ್ನು ಸೇವಿಸಲು ಸೂಚಿಸಲಾಗುತ್ತದೆ. ಮತ್ತೊಂದೆಡೆ, ಸೋಯಾಬೀನ್ ಮತ್ತು ಸೋಯಾ ಅತ್ಯಧಿಕ ಪ್ಯೂರಿನ್ ಅಂಶವನ್ನು ಹೊಂದಿರುತ್ತವೆ, ಸುಮಾರು 120 ರಿಂದ 140 ಮಿಗ್ರಾಂ. ಹೆಚ್ಚಿನ ಯೂರಿಕ್ ಆಮ್ಲದ ಮಟ್ಟವನ್ನು ಹೊಂದಿರುವವರು ಅವುಗಳನ್ನು ಸಂಪೂರ್ಣವಾಗಿ ಬಿಟ್ಟುಬಿಬೇಕು

**ಯೂರಿಕ್ ಆಮ್ಲದ ಸಂದರ್ಭದಲ್ಲಿ ತೊಗರಿ ಬೇಳೆಯನ್ನು ತಿನ್ನಬೇಡಿ:** ಫೈಬರ್ ಜೊತೆಗೆ ಪ್ರೋಟೀನ್ ಅಂಶ ಹೆಚ್ಚಿರುವ ಆಹಾರಗಳನ್ನು ಸೇವಿಸುವುದ ರಿಂದ ಯೂರಿಕ್ ಆಮ್ಲ ಹೆಚ್ಚಾಗುವುದನ್ನು ತಡೆಯಲು ಸಹಾಯ ಮಾಡುತ್ತದೆ ಎಂದು ಸಂಶೋಧನೆ ತೋರಿಸುತ್ತದೆ. ಅಧಿಕ ಫೈಬರ್ ಅಂಶ ಇರುವ ಆಹಾರಗಳು ಯೂರಿಕ್ ಆಮ್ಲದ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ದ್ವಿದಳ ಧಾನ್ಯಗಳು ಉತ್ತಮ ಪ್ರಮಾಣದ ಕರಗದ ಮತ್ತು ಕರಗುವ ನಾರನ್ನು ಹೊಂದಿರುತ್ತವೆ. ಅಧಿಕ ಯೂರಿಕ್ ಆಮ್ಲದ ಮಟ್ಟಗಳಿಗೆ ಸಸ್ಯ ಆಧಾರಿತ ಆಹಾರವನ್ನು ಸೇವಿಸುವುದು ಸಮುದ್ರಾಹಾರ, ಕೆಂಪು ಮಾಂಸ, ಮತ್ತು ಕೋಳಿ ಮಾಂಸಕ್ಕಿಂತ ಉತ್ತಮ ಎಂದು ಒಂದು ಅಧ್ಯಯನವು ಸೂಚಿಸುತ್ತದೆ.

**ಪೌಷ್ಟಿಕತಜ್ಞ ಕಿರಣ್ ಕುಕ್ರೇಜಾ ಅವರ ಪ್ರಕಾರ:** ಆಹಾರ ತಜ್ಞ ಮತ್ತು ಪೌಷ್ಟಿಕತಜ್ಞ ಕಿರಣ್ ಕುಕ್ರೇಜಾ ಅವರ ಪ್ರಕಾರ, ಬೇಳೆಕಾಳುಗಳ ವಿಚಾರದಲ್ಲಿ ಅಷ್ಟೊಂದು ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ, ನಾವು ಮಾಡ ಬೇಕಾಗಿರುವುದು ಸರಿಯಾದ ಬೇಳೆಯನ್ನು ಆರಿಸುವುದು ಪ್ರಮಾಣವನ್ನು ಗಮನದಲ್ಲಿಟ್ಟುಕೊಳ್ಳುವುದು. ಅವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ನೀಡಲಾಗಿದೆ . ಮಸೂರ್ ದಾಲ್, ತೊಗರಿ ಬೇಳೆ, ಹೆಸರು ಬೇಳೆ ದೋಸೆ ಕಡಿಮೆ ಪ್ಯೂರಿನ್ ಅಂಶ ವಾರಕ್ಕೆ ಮೂರರಿಂದ ನಾಲ್ಕು ಬಾರಿ ಸೇವಿಸಬಹುದು, ಆದರೆ ಕನಿಷ್ಠ ಆರರಿಂದ ಎಂಟು ಗಂಟೆಗಳ ಕಾಲ ನೆನೆಸಿಡಿ. ಕಡಲೆ, ರಾಜ್ಮಾ ಮತ್ತು ಕಪ್ಪುಕಡಲೆ ಮಧ್ಯಮ ಹೆಚ್ಚಿನ ಪ್ಯೂರಿನ್ ಅಂಶ 10 ರಿಂದ 15 ದಿನಗಳಿಗೊಮ್ಮೆ ಸೇವಿಸಬಹುದು. ಹಳದಿ ಹೆಸರು ಬೇಳೆ ಕಡಿಮೆ ಪ್ಯೂರಿನ್ ಅಂಶ (25 ರಿಂದ 35 ಮಿಗ್ರಾಂ)ಪ್ರತಿದಿನ ಸೇವಿಸಬಹುದು.ಸೋಯಾಬೀನ್ ಮತ್ತು ಸೋಯಾ ಚಂಕ್ಸ್ ಅತಿ ಹೆಚ್ಚು ಪ್ಯೂರಿನ್ ಅಂಶ ಸಂಪೂರ್ಣವಾಗಿ ದೂರವಿರಿ.



# ಲೆಮನ್ ಪೆಪ್ಪರ್ ಚಿಕನ್ ಮಾಡಿ ಮತ್ತೆ ತಿನ್ಬೇಕು ಅನ್ಸತ್ತೆ



ಸಾಮಾನ್ಯವಾಗಿ ವಾರಾಂತ್ಯದಲ್ಲಿ ಏನಾದರೂ ಸ್ಪೆಷಲ್ ಮಾಡ್ಬೇಕು ಅಂದುಕೊಳ್ತೀವಿ. ಆದರೆ ಏನು ಮಾಡೋದು ಅಂತಾನೇ ಗೊತ್ತಾಗಲ್ಲ. ಅದರಲ್ಲೂ ಕೆಲವೊಮ್ಮೆ ನಾನ್ ವೆಜ್ ಮಾಡಬೇಕು ಅನಿಸುತ್ತೆ. ಅದರಲ್ಲೂ ಒಂದೇ ಸಮಸ್ಯೆ ಏನ್ ಮಾಡೋದು ಅಂತಾ? ಹೀಗಿರುವಾಗ ಒಂದು ಬಾರಿ ಲೆಮನ್ ಪೆಪ್ಪರ್ ಚಿಕನ್ ಮಾಡಿ ಸವಿಯಿರಿ.. ನಿಜಕ್ಕೂ ಮತ್ತೆ ತಿನ್ಬೇಕು ಅನಿಸೋದಂತು ಪಕ್ಕಾ.

## ಬೇಕಾಗುವ ಸಾಮಾಗ್ರಿಗಳು

- ಚಿಕನ್
- ಪೆಪ್ಪರ್ ಪೌಡರ್
- ಶುಂಠಿ ಬೆಳ್ಳುಳ್ಳಿ ಪೌಡರ್
- ಎಣ್ಣೆ
- ಉಪ್ಪು-ರುಚಿಗೆ ತಕ್ಕಷ್ಟು
- ಖಾರದ ಪುಡಿ
- ಕಾರ್ನ್ ಫ್ಲೋರ್
- ಮೊಟ್ಟೆ
- ನಿಂಬೆ ರಸ
- ಚಿಲ್ಲಿ ಫ್ಲೇಕ್ಸ್



**ಮಾಡುವ ವಿಧಾನ:** ಮೊದಲಿಗೆ ಬೋನ್ ಲೆಸ್ ಚಿಕನ್‌ನನ್ನು ಚೆನ್ನಾಗಿ ತೊಳೆದುಕೊಳ್ಳಿ. ಅದಕ್ಕೆ ಬೆಳ್ಳುಳ್ಳಿ ಪೌಡರ್, ಪೆಪ್ಪರ್ ಪೌಡರ್, ಉಪ್ಪು, ಖಾರದ ಪುಡಿ, ಕಾರ್ನ್ ಫ್ಲೋರ್, ಮೊಟ್ಟೆ ಒಡೆದು ಹಾಕಿ. ಬಳಿಕ ಚಿಕನ್‌ನನ್ನು ಚೆನ್ನಾಗಿ ಮ್ಯಾರಿನೇಟ್ ಮಾಡಿಕೊಳ್ಳಿ. ಇನ್ನೊಂದು ಕಡೆ ಚಿಪ್ಸ್‌ನ್ನು ಮಿಕ್ಸಿಗೆ ಹಾಕಿಟ್ಟುಕೊಳ್ಳಿ. ಮ್ಯಾರಿನೇಟ್ ಮಾಡಿದ ಚಿಕನ್‌ನ್ನು ಚಿಪ್ಸ್‌ನಲ್ಲಿ ಅದ್ದಿ, ಕರಿದುಕೊಳ್ಳಿ.

ಬಳಿಕ ಇನ್ನೊಂದು ಬಾಣಲಿಗೆ ಬಟರ್, ಸಣ್ಣದಾಗಿ ಹೆಚ್ಚಿದ ಬೆಳ್ಳುಳ್ಳಿ, ಚಿಲ್ಲಿ ಫ್ಲೇಕ್ಸ್, ನಿಂಬೆ ರಸ, ಜೇನು ತುಪ್ಪ, ನೀರು, ಉಪ್ಪು, ಪೆಪ್ಪರ್ ಪೌಡರ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಒಂದು ಬಟ್ಟಲಿನಲ್ಲಿ ಕಾರ್ನ್ ಫ್ಲೋರ್‌ಗೆ ನೀರು ಬೆರೆಸಿ ಕಲಸಿಕೊಂಡು ಮಿಶ್ರಣಕ್ಕೆ ಹಾಕಿ. ಬಳಿಕ ಚೆನ್ನಾಗಿ ಕುದಿಸಿಕೊಂಡು ಒಂದು ಬಟ್ಟಲಿಗೆ ಹಾಕಿ. ಕೊನೆಗೆ ಕರಿದ ಚಿಕನ್‌ನ್ನು ಈ ಮಿಶ್ರಣಕ್ಕೆ ಅದ್ದಿದರೆ ಲೆಮನ್ ಪೆಪ್ಪರ್ ಚಿಕನ್ ತಯಾರಾಗುತ್ತದೆ.



# ಸಿಹಿಕುಂಬಳಕಾಯಿಯ ಉಪಯೋಗಗಳು

ಕುಂಬಳಕಾಯಿಯಲ್ಲಿ ಎರಡು ವಿಧಗಳಿವೆ. ಕೆಂಪುಕುಂಬಳ ಮತ್ತು ಬಿಳಿಬಣ್ಣದ್ದು. ಕೆಂಪುಕುಂಬಳವನ್ನು ಸಿಹಿಗುಂಬಳ ಎಂದೂ, ಬಿಳಿಬಣ್ಣದ್ದನ್ನು ಬೂದುಗುಂಬಳ ಎಂದೂ ಕರೆಯುತ್ತಾರೆ. ಸಿಹಿಕುಂಬಳಕಾಯಿಯಲ್ಲಿ ತೇವಾಂಶ, ಸಸಾರಜನಕ, ಮೇದಸ್ಸು, ಖನಿಜಾಂಶ ಕಾರ್ಬೋಹೈಡ್ರೇಟ್ಸ್, ಕ್ಯಾಲ್ಸಿಯಂ, ಸೋಡಿಯಂ, ಪೊಟ್ಯಾಷಿಯಂ, ಗಂಧಕ, ಕಬ್ಬಿಣ, ತಾಮ್ರ, ವಿಟಮಿನ್ ಎ, ಬಿ1, ಬಿ2, ಸಿ ಸಮೃದ್ಧಿಯಾಗಿದೆ. ಸಿಹಿಕುಂಬಳದಿಂದ ಪಲ್ಯ, ಹುಳಿ, ಕೂಟು, ಪಾಯಸ, ಬರ್ಫಿ, ಕೇಕ್, ರೊಟ್ಟಿ, ಗೊಜ್ಜು ಪದಾರ್ಥಗಳನ್ನು ಮಾಡಬಹುದು.

**ದೇಹಕ್ಕೆ ಪುಷ್ಟಿ:** ಬಲಿತು ಹಣ್ಣಾಗಿರುವ ಸಿಹಿಕುಂಬಳಕಾಯಿ ಹೆಚ್ಚು ರುಚಿಕರ, ಇದು ವೀರಗಳನ್ನು ವೃದ್ಧಿಸುವುದು. ಮಲ ಮೂತ್ರಗಳನ್ನು ಸಡಿಲಪಡಿಸುವುದು. ಪಿತ್ತವಿಕಾರ, ಮೂಲ ವ್ಯಾಧಿ, ಹೊಟ್ಟೆಉಬ್ಬರ, ರಕ್ತವಿಕಾರವನ್ನು ಗುಣಪಡಿಸುತ್ತದೆ.

**ಸಿಹಿಕುಂಬಳಕಾಯಿಯ ಬೀಜ:** ಹೆಚ್ಚು ರುಚಿಕರ ಮತ್ತು ಪುಷ್ಟಿಕರ. ಹೃದಯ ಮತ್ತು ಮೆದುಳಿಗೆ ವಿಶೇಷ ಬಲವನ್ನು ಕೊಡುತ್ತದೆ. ಹೃದಯ ಮತ್ತು ಮೆದುಳಿನ ದುರ್ಬಲತೆ ಇರುವವರು ಸತತವಾಗಿ ಬೀಜವನ್ನು ತಿನ್ನುವುದರಿಂದ ಅಥವಾ ಬೀಜವನ್ನು ಹಾಲಿನಲ್ಲಿ ಅರೆದು ಕುಡಿಯುವುದರಿಂದ ತುಂಬಾ ಲಾಭ ತರುವುದು.

**ಮಾನಸಿಕ ದೌರ್ಬಲ್ಯ:** ಜೇನಿನೊಡನೆ ಸೇವಿಸುತ್ತಿದ್ದರೆ, ಮಾನಸಿಕ ಒತ್ತಡ ಕಡಿಮೆಯಾಗುತ್ತದೆ. ಹೆಚ್ಚು ಮೆದುಳಿಗೆ ಕೆಲಸ ಕೊಟ್ಟು ಕಾರ್ಯ ನಿರ್ವಹಿಸುವವರಿಗೆ ಇದರ ಬೀಜದ ಚೂರ್ಣವನ್ನು ಈ ಬೀಜದ ಪುಡಿ ತುಂಬಾ ಸಹಕಾರಿ.



**ತೆಳ್ಳಗಿರುವವರಿಗೆ:** ಬಾದಾಮಿಯನ್ನು ಅರೆದು ಜೇನಿನೊಡನೆ ಸೇವಿಸುತ್ತಿದ್ದರೆ, ಶರೀರದ ತೂಕ ಮತ್ತು ಜ್ಞಾಪಕ ಶಕ್ತಿ ಹೆಚ್ಚಾಗುತ್ತದೆ.

**ಸುಟ್ಟಗಾಯಗಳಿಗೆ:** ಸಿಹಿಕುಂಬಳಕಾಯಿಯ ಎಲೆಯ ರಸವನ್ನು ಸುಟ್ಟಗಾಯಕ್ಕೆ ಲೇಪಿಸುವುದರಿಂದ ಉರಿ ಕಡಿಮೆಯಾಗುತ್ತದೆ.

**ಹುಳುಕಚ್ಚಿದಾಗ:** ಸಿಹಿಕುಂಬಳಕಾಯಿಯ ತೊಟ್ಟನ್ನು ನೀರಿನಲ್ಲಿ ತೇಯ್ದು ಹುಳು ಕಚ್ಚಿದ ಜಾಗಕ್ಕೆ ಹಚ್ಚಿದರೆ, ನೋವು ಹಾಗೂ ಕೆರೆತ ಕಡಿಮೆಯಾಗುತ್ತದೆ.

**ಜಂತುಹುಳುಗಳ ನಿವಾರಣೆಗೆ:** ಹೊಟ್ಟೆಯ ಒಳಗೆ ಇರುವ ಜಂತುಹುಳುಗಳ ನಿವಾರಣೆಗೆ ಸಿಹಿಕುಂಬಳಕಾಯಿಯ ಬೀಜಗಳನ್ನು ಜಜ್ಜಿ ರಸ ತೆಗೆದು ಕುಡಿದರೆ, ಜಂತುಹುಳುಗಳು ಮೂತ್ರದ ಜೊತೆಗೆ ಹೊರಹೋಗುತ್ತವೆ.

**ಕುರು ಆದಾಗ:** ದೇಹದ ಯಾವುದೇ ಭಾಗದಲ್ಲಿ ಕುರು ಆದರೂ ಆ ಸ್ಥಳಕ್ಕೆ ಸಿಹಿಕುಂಬಳಕಾಯಿಯ ಎಲೆಯನ್ನು ಬಿಸಿಮಾಡಿ ಕಟ್ಟಿದರೆ ಕುರು ಒಡೆದು ಕೀವು ಹೊರಬಂದು, ಗಾಯ ಮಾಯುತ್ತದೆ.

**ಮೂತ್ರಪಿಂಡಗಳ ಆರೋಗ್ಯ:** ಸಿಹಿಕುಂಬಳಕಾಯಿಯ ಒಳಗಿನ ಬೀಜ ಮೂತ್ರಪಿಂಡಗಳ ಆರೋಗ್ಯ, ಹಾಗೂ ರಕ್ಷಣೆಗೆ ಸಹಾಯಕವಾಗುವುದು.


**ಜೀರ್ಣಶಕ್ತಿ:** ಸಿಹಿಕುಂಬಳಕಾಯಿಯ ಎಲೆಯನ್ನು ಅಡುಗೆಯಲ್ಲಿ ಬಳಸುವುದರಿಂದ ಜೀರ್ಣಶಕ್ತಿಯು ವೃದ್ಧಿಸುತ್ತದೆ.

# ಶ್ರೀಗುರುರಾಯರ ಸನ್ನಿಧಿಯಲ್ಲಿ ಶ್ರೀಸತ್ಯನಾರಾಯಣ ವ್ರತ ಪೂಜೆ

• ಉದಯವಾಹಿನಿ, ಬೆಂಗಳೂರು

ಜಯನಗರದ ಐದನೇ ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂ ಗಳವರ ಆದೇಶ ಅನುಗ್ರಹದೊಂದಿಗೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಪೌರ್ಣಮಿ ಪ್ರಯುಕ್ತಯ ಸಾಮೂಹಿಕ ಶ್ರೀಸತ್ಯನಾರಾಯಣ ವ್ರತ ಪೂಜೆಯನ್ನು ಪುರೋಹಿತರಾದ ಶ್ರೀ ನಂದಕಿಶೋರಾಚಾರ್ಯರು ಹಾಗೂ ಕಟ್ಟಿ ರಾಘವೇಂದ್ರ ಆಚಾರ್ಯರು ನೆರವೇರಿಸಿದರು. ವಿಶೇಷವಾಗಿ ಶ್ರೀ ಸತ್ಯನಾರಾಯಣ ದೇವರ ಭಾವಚಿತ್ರಕ್ಕೆ ವಿಶೇಷ ಪುಷ್ಪಗಳಿಂದ ಮತ್ತು ದೀಪಗಳಿಂದ ಅಲಂಕರಿಸಿ ಮಂಗಳಾರತಿಯನ್ನು ಸಲ್ಲಿಸಲಾಯಿತು. ಭಕ್ತಾದಿಗಳು ಈ ವ್ರತ ಪೂಜೆಯಲ್ಲಿ ಭಾಗವಹಿಸಿ ಪ್ರಸಾದವನ್ನು ಸ್ವೀಕರಿಸಿ ಶ್ರೀಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.

ಉದಯವಾಹಿನಿ ಚಿತ್ರ



# ಬೆಳಗ್ಗೆ ಖಾಲಿ ಹೊಟ್ಟೆಗೆ ಟೀ ಒಳ್ಳೆಯದೋ ಅಥವಾ ಕಾಫಿ?

ಸಾಮಾನ್ಯವಾಗಿ ಎಲ್ಲರ ಬೆಳಗ್ಗೆ ಆರಂಭವಾಗುವುದು ಒಂದೋ ಒಂದು ಕಪ್ ಟೀ ಅಥವಾ ಒಂದು ಕಪ್ ಕಾಫಿಯಿಂದ ಅಲ್ವೇ ಆದರೆ ಈ ಟೀ ಮತ್ತು ಕಾಫಿಯಲ್ಲಿ ಆರೋಗ್ಯಕ್ಕೆ ಒಳ್ಳೆಯದು ಯಾವುದು ಎಂಬ ಚರ್ಚೆ ಶುರುವಾಗಿ ವರ್ಷಗಳೇ ಕಳೆದಿವೆ. ಹಾಗಿದ್ದರೆ ಬ್ರೇಕ್‌ಫಾಸ್ಟ್‌ಗಿಂತ ಮೊದಲು ಕುಡಿಯಲು ಅತ್ಯಂತ ಒಳ್ಳೆಯದು ಯಾವುದು? ಬ್ಲಾಕ್ ಕಾಫಿ ಎನ್ನುತ್ತದೆ ಹೊಸ ಅಧ್ಯಯನ. ನೀವೇನಂತೀರಿ? ಟೀ ಮತ್ತು ಕಾಫಿಯನ್ನು ಹೋಲಿಕೆ ಮಾಡಿ ನೋಡಿದರೆ, ಟೀಯಲ್ಲಿ ಇಲ್ಲದ ಕೆಲ ವಿಶೇಷ ಗುಣಗಳು ಕಾಫಿಗಿದೆ. ಹಾಗೆ ನೋಡಿದರೆ ಚಹಾಗಿಂತ ಕಾಫಿಯಲ್ಲಿ ಕೆಫೀನ್ ಅಂಶ ಹೆಚ್ಚು ಇರುತ್ತದೆ. ಒಂದು ಕಪ್ ಬ್ಲಾಕ್ ಕಾಫಿಯಲ್ಲಿ 90-100 ಮಿ.ಗ್ರಾಂ ಕೆಫೀನ್ ಇದ್ದರೆ, ಒಂದು ಕಪ್ ಚಹಾದಲ್ಲಿ ಇದರ ಅರ್ಧದಷ್ಟು ಕೆಫೀನ್ ಮಾತ್ರ ಇರುತ್ತದೆ. ಬೆಳಗ್ಗೆ ನಿದ್ರೆಯಿಂದ ಎದ್ದ ಕೂಡಲೇ ಮೆದುಳನ್ನು ಚುರುಕಾಗಿಸಲು, ಏಕಾಗ್ರತೆ ಲಭಿಸಲು ಬ್ಲಾಕ್ ಕಾಫಿ ಸಹಾಯ ಮಾಡುತ್ತದೆ. ದೈನಂದಿನ ಕೆಲಸ ಅಥವಾ ಕಲಿಕೆಯ ಆರಂಭದಲ್ಲಿ ಶರೀರ ಹಾಗೂ ಮನಸ್ಸಿಗೆ ತಾಜಾತನ ನೀಡಲು ಟೀಗಿಂತ ಕಾಫಿ ಒಳ್ಳೆಯದು.

**ತೂಕ ಇಳಿಸಲು:** ದೇಹದ ಭಾರವನ್ನು ಇಳಿಸಲು ಪ್ರಯತ್ನಿಸುವವರಿಗೆ ಬ್ಲಾಕ್ ಕಾಫಿ ಒಂದು ಅನುಗ್ರಹವೆಂದೇ ಹೇಳಬಹುದು. ಸಕ್ಕರೆ ಮತ್ತು ಹಾಲು ಸೇರಿಸದ ಕಾಫಿಯಲ್ಲಿ ಕ್ಯಾಲೊರಿ ತುಂಬಾ ಕಡಿಮೆ ಇರುತ್ತದೆ. ಇದು ಮೆಟಾಬಾಲಿಸಂ (ಚಯಾಪಚಯ ಅಥವಾ ಜೀವ ರಾಸಾಯನಿಕ ಕ್ರಿಯೆ) ಹೆಚ್ಚಿಸಿ ಶರೀರದಲ್ಲಿರುವ ಕೊಬ್ಬನ್ನು ಕರಗಿಸಲು ಸಹಾಯ ಮಾಡುತ್ತದೆ. ಇದೇ ವೇಳೆ, ಹಾಲು ಸೇರಿಸಿದ ಚಹಾದಲ್ಲಿ ಕ್ಯಾಲೊರಿ ಹೆಚ್ಚು ಇರುವುದರಿಂದ ಮತ್ತು ಅದನ್ನು ಪದೇಪದೆ ಕುಡಿಯುವುದರಿಂದ ದೇಹದ ತೂಕ ಹೆಚ್ಚಾಗಲು ಕಾರಣವಾಗಬಹುದು.

**ರೋಗ ಪ್ರತಿರೋಧ ಮತ್ತು ನೆನಪಿನ ಶಕ್ತಿಗೆ:** ಹೃದ್ರೋಗ, ಸಕ್ಕರೆ ಕಾಯಿಲೆ ಇತ್ಯಾದಿ ರೋಗಗಳನ್ನು ತಡೆಯಲು ಸಹಾಯ ಮಾಡುವ ಆ್ಯಂಟಿಆಕ್ಸಿಡೆಂಟ್ ಅಂಶ



ಬ್ಲಾಕ್ ಕಾಫಿಯಲ್ಲಿ ಧಾರಾಳವಾಗಿದೆ. ಜೊತೆಗೆ ದಿನನಿತ್ಯ ಕಾಫಿ ಸೇವನೆಯು ನೆನಪಿನ ಶಕ್ತಿ ಹೆಚ್ಚಿಸುವುದರ ಜೊತೆಗೆ ಮರೆವಿನ ಕಾಯಿಲೆ (ಅಲ್ಜೈಮರ್ ರೋಗ), ಪಾರ್ಕಿನ್ಸನ್ಸ್ ಇತ್ಯಾದಿ ರೋಗಗಳು ಬರುವ ಸಾಧ್ಯತೆಯನ್ನು ಕಡಿಮೆ ಮಾಡಲು ನೆರವಾಗುತ್ತದೆ ಎಂದು ಅಧ್ಯಯನಗಳು ಹೇಳುತ್ತವೆ.

**ಆವರ್ಕೌಟ್‌ಗಿಂತ ಮುಂಚೆ ಒಂದು ಕಪ್ ಕಾಫಿ:** ನೀವು ಜಿಮ್‌ಗೆ ಹೋಗುವವರೋ ಅಥವಾ ದಿನನಿತ್ಯ ವ್ಯಾಯಾಮ ಮಾಡುವವರಾಗಿದ್ದರೆ, ವರ್ಕೌಟ್‌ಗಿಂತ ಮುಂಚೆ ಒಂದು ಕಪ್ ಕಾಫಿ ಕುಡಿಯುವುದು ತುಂಬಾ ಒಳ್ಳೆಯದು. ಇದು ಶಕ್ತಿ ಹೆಚ್ಚಿಸುವಲ್ಲಿ ಸಹಾಯ ಮಾಡುತ್ತದೆ. ಜೊತೆಗೆ ಸ್ನಾಯುಗಳಿಗೆ ಹೆಚ್ಚಿನ ಶಕ್ತಿ ನೀಡುತ್ತದೆ ಮತ್ತು ಹೆಚ್ಚು ಹೊತ್ತು ವ್ಯಾಯಾಮ ಮಾಡಲು ನೆರವಾಗುತ್ತದೆ.

**ಗಮನಿಸಬೇಕಾದ ಅಂಶಗಳು:** ಬ್ಲಾಕ್ ಕಾಫಿ ಆರೋಗ್ಯಕ್ಕೆ ಒಳ್ಳೆಯದಾಗಿದ್ದರೂ, ಕುಡಿಯುವ ಪ್ರಮಾಣ ಹೆಚ್ಚಾಗದಂತೆ ನೋಡಿಕೊಳ್ಳುವುದು ಅತ್ಯಂತ ಅಗತ್ಯ. ಸಕ್ಕರೆ ಅಥವಾ ಕ್ರೀಮ್ ಸೇರಿಸದೆ ಕುಡಿಯುವುದು ಇನ್ನೂ ಒಳ್ಳೆಯದು. ರುಚಿಗೆ ಬೇಕಾದರೆ ಚಿಟಿಕೆ ದಾಲ್ಚಿನ್ನಿ ಪುಡಿ (ಸಿನಮನ್ ಪೌಡರ್ ಸೇರಿಸಬಹುದು. ಬ್ಲಾಕ್ ಕಾಫಿ ಇಷ್ಟವಿಲ್ಲದವರು ಚಹಾ ಕುಡಿಯಬಹುದು, ಆದರೆ ದಿನಕ್ಕೆ ಎರಡು ಕಪ್‌ಗಿಂತ ಹೆಚ್ಚು ಆಗದಂತೆ ನೋಡಿಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು.



# ಬಿರಿಯಾನಿ ವಿಚಾರ | ಕೊನೆಗೂ ಮೌನ ಮುರಿದ ಡಾಲಿ: ಏನ್ ಹೇಳಿದ್ರು ನೋಡಿ!



ನಟ ಡಾಲಿ ಧನಂಜಯ್ ಹೆಸರು ಇತ್ತೀಚೆಗೆ ಸೋಶಿಯಲ್ ಮೀಡಿಯಾದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಆದರೆ ಈ ಬಾರಿ ಸಿನಿಮಾ ಅಥವಾ ಪಾತ್ರದ ವಿಚಾರವಲ್ಲ, ಅವರು ಬಿರಿಯಾನಿ ತಿಂದಿರೋದಕ್ಕೆ. ಹೌದು.. ಬೆಂಗಳೂರಿನ ಅಪ್ಪು'ಸ್ ಬಿರಿಯಾನಿ ಹೋಟೆಲ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಧನಂಜಯ್ ಆಹಾರ ಸೇವಿಸಿದ ದೃಶ್ಯ ವೈರಲ್ ಆಗಿ, ಅನಗತ್ಯ ಚರ್ಚೆಗಳು ಆರಂಭವಾಗಿವೆ.ಈ ಬಗ್ಗೆ ಪ್ರತಿಕ್ರಿಯಿಸಿದ ಡಾಲಿ ಧನಂಜಯ್, ತಮ್ಮ ಆಹಾರ ಪದ್ಧತಿ ಬಗ್ಗೆ ಸಾರ್ವಜನಿಕವಾಗಿ ಮಾತನಾಡಲು ತಾನು ಇಷ್ಟಪಡೋದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸ್ನೇಹಿತನ ಹೋಟೆಲ್ ಉದ್ಘಾಟನೆಗೆ ಸರಳವಾಗಿ ಹೋಗಿ ಪ್ರೀತಿಯಿಂದ ಊಟ ಮಾಡಿಕೊಂಡು ಬಂದೆ, ಇದೊಂದು ದೊಡ್ಡ ವಿಚಾರವಾಗುತ್ತದೆ ಎಂದು ನಿರೀಕ್ಷಿಸಿರಲಿಲ್ಲ ಎಂದು ಹೇಳಿದ್ದಾರೆ. ಇಂತಹ ವಿಷಯದ ಮೇಲೆ ಚರ್ಚೆ ನಡೆಯುತ್ತಿರುವುದನ್ನು ನೋಡಿ ಶಾಕ್ ಆಯ್ತು ಎಂದು ಅವರು ಹೇಳಿದರು. ಮಾಂಸಾಹಾರ ಸೇವನೆಯ ಜೊತೆಗೆ ಸಮುದಾಯವನ್ನು ಎಳೆದು ತರುವ ಪ್ರಯತ್ನ ಬೇಸರ ತಂದಿದೆ ಎಂದು ಡಾಲಿ ಅಸಮಾಧಾನ ವ್ಯಕ್ತಪಡಿಸಿದರು. ''ನನ್ನ ಆಹಾರ ನನ್ನ ಆಯ್ಕೆ. ಇದಕ್ಕೆ ಬೇರೆ ಬೇರೆ ಅರ್ಥ ಕೊಡೋದು ತಪ್ಪು'' ಎಂದು ಹೇಳಿದರು. ತಾನು ನಟನಾಗಿ ಹಾಗೂ ನಿರ್ಮಾಪಕನಾಗಿ ಸಿನಿಮಾಗಳಿಗಾಗಿ ಮಾಡುವ ಪ್ರಯತ್ನಗಳ ಬಗ್ಗೆ ಚರ್ಚೆ ನಡೆಯಬೇಕು ಎಂಬುದು ನನ್ನ ಆಶಯ ಎಂದು ಡಾಲಿ ಧನಂಜಯ್ ಹೇಳಿದ್ದಾರೆ.



# ಅವಳಿ ಮಕ್ಕಳಿಗೆ ಜನ್ಮ ನೀಡಿದ ರಾಮ್‌ಚರಣ್ ಪತ್ನಿ ಉಪಾಸನಾ

ತಾಯಿ ಮತ್ತು ಮಕ್ಕಳು ಆರೋಗ್ಯ

ಕೋನಿಡೇಲ ಕುಟುಂಬ ಸಂತೋಷ

ತೆಲುಗು ಸೂಪರ್ ಸ್ಟಾರ್ ರಾಮ್‌ಚರಣ್ ದಂಪತಿ ಉಪಾಸನಾ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದು, ಮೆಗಾಸ್ಟಾರ್ ಕುಟುಂಬದಲ್ಲಿ ಭಾರೀ ಸಂಭ್ರಮ ಮನೆಮಾಡಿದೆ. ಮದುವೆಯಾಗಿ ಅನೇಕ ವರ್ಷಗಳು ಕಳೆದಿದ್ದರೂ ರಾಮ್‌ಚರಣ್ ಉಪಾಸನಾ ದಂಪತಿ ಮಗು ಮಾಡಿಕೊಂಡಿರಲಿಲ್ಲ. ಎರಡು ವರ್ಷದ ಹಿಂದೆ ಪುತ್ರಿ ಜನಿಸಿದ್ದಳು. ಇದೀಗ ಅವಳಿ ಮಕ್ಕಳು ಜನಿಸಿದ್ದು, ಒಂದು ಹೆಣ್ಣು ಹಾಗೂ ಇನ್ನೊಂದು ಗಂಡು ಮಗುವಾಗಿದೆ. ಅವಳಿ ಮಕ್ಕಳು ಜನಿಸಿರುವ ವಿಚಾರವನ್ನ ಚಿರಂಜೀವಿ ಖುಷಿ ವ್ಯಕ್ತಪಡಿಸಿದ್ದಾರೆ. ಕೋನಿಡೇಲ ಕುಟುಂಬ ಸಂತೋಷದಲ್ಲಿದೆ. ಜ.31ರಂದು ಹೆರಿಗೆಯಾಗಿದ್ದು, ತಾಯಿ ಹಾಗೂ ಮಕ್ಕಳು ಆರೋಗ್ಯವಾಗಿದ್ದಾರೆ. ನಿಮ್ಮೆಲ್ಲರ ಆಶೀರ್ವಾದ, ಹರಕೆ, ಹಾರೈಕೆಗೆ ಧನ್ಯವಾದಗಳು ಎಂದು ತಿಳಿಸಿದ್ದಾರೆ.

# ನಮ್ಮ ಬಾಂಧವ್ಯಕ್ಕೆ 7 ವರ್ಷಗಳ ಸುಂದರ ಇತಿಹಾಸ: ಟ್ರೋಲರ್‌ಗಳಿಗೆ ಖಡಕ್ ಉತ್ತರ ಕೊಟ್ಟ ಆಲಿಯಾ ಭಟ್!



7 ವರ್ಷಗಳ ಸುಂದರ ಬಾಂಧವ್ಯ

ಬಾಲಿವುಡ್‌ನ ನಟಿ ಆಲಿಯಾ ಭಟ್ ಮತ್ತು ರಣಬೀರ್ ಕಪೂರ್ ಜೋಡಿ ಕುರಿತು ಸೋಷಿಯಲ್ ಮೀಡಿಯಾದಲ್ಲಿ ಆಗಾಗ್ಗೆ ಋಣಾತ್ಮಕ ಚರ್ಚೆಗಳು ನಡೆಯುತ್ತಲೇ ಇರುತ್ತವೆ. ರಣಬೀರ್ ಕಪೂರ್ ಅವರು ಆಲಿಯಾ ಮೇಲೆ ನಿಯಂತ್ರಣ ಸಾಧಿಸುತ್ತಾರೆ ಅಥವಾ ಅವರ ನಡುವೆ ಎಲ್ಲವೂ ಸರಿಯಿಲ್ಲ ಎಂಬಂತಹ ವದಂತಿಗಳು ಹರಿದಾಡುತ್ತಿರುತ್ತವೆ. ಇದೀಗ ಇಂತಹ ಟ್ರೋಲರ್‌ಗಳಿಗೆ ಆಲಿಯಾ ಭಟ್ ತಕ್ಕ ಉತ್ತರ ನೀಡುವ ಮೂಲಕ ಎಲ್ಲರ ಬಾಯಿ ಮುಚ್ಚಿಸಿದ್ದಾರೆ. ಇತ್ತೀಚೆಗೆ ನೀಡಿದ ಸಂದರ್ಶನವೊಂದರಲ್ಲಿ ಮಾತನಾಡಿದ ಆಲಿಯಾ ಭಟ್, ಆನ್‌ಲೈನ್‌ನಲ್ಲಿ ತಮ್ಮ ಸಂಬಂಧದ ಬಗ್ಗೆ ನಡೆಯುವ ಚರ್ಚೆಗಳು ಸಂಪೂರ್ಣವಾಗಿ 'ಅಸಂಬದ್ಧ ನಮ್ಮ ನಡುವಿನ ಬಾಂಧವ್ಯಕ್ಕೆ ಸರಿಸುಮಾರು 7 ವರ್ಷಗಳ ಸುಂದರ ಇತಿಹಾಸವಿದೆ. ಆದರೆ ಜನರು ಕೇವಲ 7 ಸೆಕೆಂಡ್‌ನ ಅಥವಾ 3 ಸೆಕೆಂಡ್‌ನ ವಿಡಿಯೋ ತುಣುಕುಗಳನ್ನು ನೋಡಿ ನಮ್ಮ ಸಂಬಂಧದ ಬಗ್ಗೆ ತೀರ್ಪು ನೀಡುತ್ತಾರೆ. ಈ ಗದ್ದಲಗಳು ನಮಗೆ ಕೇಳಿಸುವುದೇ ಇಲ್ಲ, ಏಕೆಂದರೆ ಅದು ನೈಜವಲ್ಲ ಎಂದು ಅವರು ಹೇಳಿದ್ದಾರೆ.

ಇದರಿಂದ ನನ್ನ ಕುಟುಂಬದ ನೆಮ್ಮದಿ ಬದಲಾಗಿದೆಯೇ ಖಂಡಿತ ಇಲ್ಲ. ನನ್ನ ದೈನಂದಿನ ಬದುಕು ಮೊದಲಿಗಿಂತಲೂ ಸುಂದರವಾಗಿದೆ. ಪ್ರತಿದಿನ ನಾನು ನೆಮ್ಮದಿಯಿಂದ ಮತ್ತು ಕೃತಜ್ಞತೆಯಿಂದ ನಿದ್ರಿಸುತ್ತೇನೆ. ಜನರು ಏನು ಅಂದುಕೊಳ್ಳುತ್ತಾರೆ ಎಂಬುದು ನನಗೆ ಮುಖ್ಯವಲ್ಲ. ಒಂದು ಕೋಣೆಯಲ್ಲಿ 50 ಜನರಿದ್ದರೆ, ಅದರಲ್ಲಿ ಕೇವಲ ನಾಲ್ವರಿಗೆ ಮಾತ್ರ ನಿಮ್ಮ ಬಗ್ಗೆ ನಿಜವಾದ ಕಾಳಜಿ ಇರುತ್ತದೆ. ಉಳಿದವರು ಏನು ಬೇಕಾದರೂ ಯೋಚಿಸಬಹುದು ಎಂದು ಆಲಿಯಾ ಹೇಳುವ ಮೂಲಕ ತಮಗೆ ಟ್ರೋಲ್‌ಗಳ ಬಗ್ಗೆ ತಲೆಕೆಡಿಸಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ರಣಬೀರ್ ಕಪೂರ್ ಅವರ ತಂದೆಯ ಜವಾಬ್ದಾರಿಯ ಬಗ್ಗೆ ಆಲಿಯಾ ಹೆಮ್ಮೆಯಿಂದ ಮಾತನಾಡುತ್ತಾ ಮಗಳು ರಾಹಾ ಹುಟ್ಟಿದ ಮೇಲೆ ರಣಬೀರ್ ಪೂರ್ತಿ ಬದಲಾಗಿದ್ದಾರೆ. ಅವರು ಹೊರಜಗತ್ತಿಗೆ ನಾಚಿಕೆ ಸ್ವಭಾವದವರಾಗಿ ಕಾಣಬಹುದು, ಆದರೆ ರಾಹಾ ಜೊತೆಗಿರುವಾಗ ಅವರೇ ಮಗುವಾಗಿಬಿಡುತ್ತಾರೆ. ಶೂಟಿಂಗ್‌ನಲ್ಲಿದ್ದರೂ ಮಗಳನ್ನು ನೋಡಲು ಓಡಿ ಬರುತ್ತಾರೆ. ರಾಹಾ ಹುಟ್ಟುವ ಮೊದಲು ಮತ್ತು ನಂತರ ಅವರು ನನ್ನನ್ನು ಅತಿಯಾಗಿ ಕಾಳಜಿ ಮಾಡಿದ್ದಾರೆ ಎಂದು ಆಲಿಯಾ ಹೇಳಿದ್ದಾರೆ.

# ಫಿಲ್ಮ್ ಚೇಂಬರ್ ಚುನಾವಣೆ ಅಧ್ಯಕ್ಷೆ ಪಟ್ಟಕ್ಕೇರಿದ ನಟಿ ಜಯಮಾಲಾ



ನಟಿ ಜಯಮಾಲಾಗೆ ಗೆಲವು

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಚುನಾವಣಾ ಫಲಿತಾಂಶ ಹೊರಬಿದ್ದಿದ್ದು, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಹಿರಿಯ ನಟಿ ಜಯಮಾಲಾ ಗೆಲುವಿನ ನಗೆ ಬೀರಿದ್ದಾರೆ. ಪದಾಧಿಕಾರಿಗಳು ಯಾರ? ಯಾರು? ಉಪಾಧ್ಯಕ್ಷ, ಖಜಾಂಚಿ ಮುಂತಾದ ಪದಾಧಿಕಾರಿಗಳ ಸ್ಥಾನಗಳಿಗೂ ಚುನಾವಣೆ ನಡೆದಿತ್ತು. ಅದರಂತೆ ಗೌರವ ಉಪಾಧ್ಯಕ್ಷರಾಗಿ ನಿರ್ಮಾಪಕರ ವಲಯದಿಂದ ಸುಂದರ್ ರಾಜ್ ಗೆದ್ದು ಉಪಾಧ್ಯಕ್ಷ ಸ್ಥಾನ ಅಲಂಕರಿಸಿದ್ರೆ, ಎಕ್ಸಿಬ್ಯೂಟರ್ ವಲಯದಿಂದ ಕಿಶೋರ್, ಡಿಸ್ಟ್ರಿಬ್ಯೂಟರ್ ವಲಯದಿಂದ ಕೆ ಮಂಜು ಉಪಾಧ್ಯಕ್ಷರಾಗಿದ್ದಾರೆ.

ನಿರ್ಮಾಪಕರ ವಲಯದಿಂದ ಎ ಗಣೇಶ್, ಡಿಸ್ಟ್ರಿಬ್ಯೂಟರ್ ವಲಯದಿಂದ ರಮೇಶ್, ಎಕ್ಸಿಬ್ಯೂಟರ್ ವಲಯದಿಂದ ಅಶೋಕ್ ಕಾರ್ಯದರ್ಶಿ ಸ್ಥಾನಗಳಿಗೆ ಚುನಾಯಿತರಾಗಿದ್ದಾರೆ. ಇನ್ನೂ ನಟ ಜಯಸಿಂಹ ಮುಸುರಿ ಖಜಾಂಚಿಯಾಗಿ ಆಯ್ಕೆ ಆಗಿದ್ದಾರೆ. 2024 – 25ನೇ ಸಾಲಿನ ಚುನಾವಣೆಯಲ್ಲಿ ಎಂ. ನರಸಿಂಹಲು ಗೆದ್ದು ಅಧ್ಯಕ್ಷರಾಗಿದ್ದರು. ಇದೀಗ ಹಿರಿಯ ನಟಿ ಜಯಮಾಲಾ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ.ಭರ್ಜರಿ ಮತ ಬೇಟೆ: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸ್ಥಾನಕ್ಕಾಗಿ ಜಯಮಾಲಾ ಹಾಗೂ ನಿರ್ಮಾಪಕ ಭಾ.ಮಾ ಹರೀಶ್ ಸ್ಪರ್ಧಿಸಿದ್ದರು. ಇಬ್ಬರ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಈ ಬಾರಿಯ ಫಿಲ್ಮ್ ಚೇಂಬರ್ ಚುನಾವಣೆಯಲ್ಲಿ ಒಟ್ಟು 843 ಮತಗಳು ಚಲಾವಣೆ ಆಗಿತ್ತು. ಈ ಪೈಕಿ 512 ವೋಟ್‌ಗಳು ಜಯಮಾಲಾ ಪರವಾಗಿ ಬಿದ್ದಿವೆ. ಭರ್ಜರಿ ಮತಗಳನ್ನ ಪಡೆದು ಜಯಮಾಲಾ ಜಯಭೇರಿ ಬಾರಿಸಿದ್ದಾರೆ. ನಿರ್ಮಾಪಕ ಭಾ ಮಾ ಹರೀಶ್ ಸೋಲು ಅನುಭವಿಸಿದ್ದಾರೆ.

# ಭಾರತಕ್ಕೆ ಆಗಮಿಸಿದ ಪಾಕ್ ಆಟಗಾರರು! ವಿಡಿಯೋ ವೈರಲ್



ಭಾರತ-ಲಂಕಾ ಜಂಟಿ ಆತಿಥ್ಯ

ಕ್ರಿಕೆಟ್ ಜಗತ್ತಿನ ಕಣ್ಣೆಲ್ಲಾ 2026ರ ಟಿ20 ವಿಶ್ವಕಪ್ ಮೇಲೆ ನೆಟ್ಟಿರುವ ನಡುವೆ, ಟೂರ್ನಿಯ ಸಂಭ್ರಮ ಈಗಾಗಲೇ ಆರಂಭವಾಗಿದೆ. ಭಾರತ-ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಈ ಮಹಾ ಟೂರ್ನಿಗೆ ವಿವಿಧ ರಾಷ್ಟ್ರಗಳ ತಂಡಗಳು ಕ್ರಮೇಣ ಆಗಮಿಸುತ್ತಿದ್ದು, ಅಮೆರಿಕ ಕ್ರಿಕೆಟ್ ತಂಡದ ಭಾರತ ಪ್ರವೇಶ ಗಮನ ಸೆಳೆದಿದೆ. ಗಮನಾರ್ಹ ಸಂಗತಿಯೆಂದರೆ, ಅಮೆರಿಕ ತಂಡದಲ್ಲಿ ಪಾಕಿಸ್ತಾನಿ ಮೂಲದ ಶಯಾನ್ ಜಹಾಂಗೀರ್, ಅಲಿ ಖಾನ್ ಮತ್ತು ಮೊಹಮ್ಮದ್ ಮೊಲ್ಸನ್ ಕೂಡ ಇದ್ದು, ಅವರಿಗೆ ಸಹ ತಿಲಕವಿಟ್ಟು ಸ್ವಾಗತಿಸಲಾಯಿತು. ಈ ದೃಶ್ಯಗಳು ಕ್ರೀಡಾಭಿಮಾನಿಗಳ ಗಮನ ಸೆಳೆದಿವೆ. ಇದು ಯುಎಸ್‌ಎಗೆ ಎರಡನೇ ಟಿ20 ವಿಶ್ವಕಪ್ ಆಗಿದ್ದು, ಚೊಚ್ಚಲ ಆವೃತ್ತಿಯಲ್ಲೇ ಸೂಪರ್ 8 ಹಂತ ತಲುಪಿದ್ದ ಸಾಧನೆಗೆ ಈ ಬಾರಿ ಪುನರಾವರ್ತನೆ ಮಾಡುವ ಗುರಿಯಿದೆ. ಮೋನಾಂಕ್ ಪಟೇಲ್ ನಾಯಕತ್ವದ ತಂಡವು ಗ್ರೂಪ್‌ನಲ್ಲಿ ಭಾರತ, ಪಾಕಿಸ್ತಾನ, ನೆದರ್ಲ್ಯಾಂಡ್ಸ್ ಮತ್ತು ನಮೀಬಿಯಾ ವಿರುದ್ಧ ಪೈಪೋಟಿ ನಡೆಸಲಿದೆ.

# ಕಝಾಕಿಸ್ತಾನದ ಎಲೆನಾ ರೈಬಾಕಿನಾ ಮುಡಿಗೆ ಆಸ್ಟ್ರೇಲಿಯನ್ ಓಪನ್ ಮಹಿಳಾ ಸಿಂಗಲ್ಸ್ ಕಿರೀಟ



ಮೆಲ್ಬರ್ನ್‌ನಲ್ಲಿ ನಡೆದ ಆಸ್ಟ್ರೇಲಿಯನ್ ಓಪನ್ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಕಝಾಕಿಸ್ತಾನದ ಸ್ಟಾರ್ ಟೆನಿಸ ಆಟಗಾರ್ತಿ ಎಲೆನಾ ರೈಬಾಕಿನಾ ಅವರು ವಿಶ್ವದ ನಂ. 1 ಆಟಗಾರ್ತಿ ಅರಿನಾ ಸಬಲೆಂಕಾ ಅವರನ್ನು ರೋಚಕ ಫೈನಲ್‌ನಲ್ಲಿ ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ ರೈಬಾಕಿನಾ, ಸಬಲೆಂಕಾ ಅವರನ್ನು 6–4, 4–6, 6–4 ಸೆಟ್‌ಗಳಿಂದ ಸೋಲಿಸಿ ತಮ್ಮ ಎರಡನೇ ಗ್ರ್ಯಾಂಡ್ ಸ್ಲ್ಯಾಮ್ ಗೆದ್ದರು.2023ರ ಫೈನಲ್‌ನಲ್ಲಿ ಅದೇ ಅಂಗಣದಲ್ಲಿ ಸಬಾಲೆಂಕಾ ವಿರುದ್ಧ ರೈಬಾಕಿನಾ ಅವರು ಸೋಲು ಅನುಭವಿಸಿದ್ದರು. ಇದೀಗ ಆ ಸೋಲಿನ ಸೇಡನ್ನು ತೀರಿಸಿಕೊಂಡರು. ಮೊದಲ ಸೆಟ್ ಅನ್ನು ಗೆಲ್ಲುವ ಮೂಲಕ ರೈಬಾಕಿನಾ ಉತ್ತಮ ಆರಂಭವನ್ನು ಪಡೆದಿದ್ದರು. ಸಬಲೆಂಕಾ ಎರಡನೇ ಸೆಟ್ ಅನ್ನು ಗೆದ್ದು ಪಂದ್ಯವನ್ನು ನಿರ್ಣಾಯಕ ಸೆಟ್‌ಗೆ ತಳ್ಳಿದರು. ಮೂರನೇ ಸೆಟ್‌ನಲ್ಲಿ ಒಂದು ಹಂತದಲ್ಲಿ ರೈಬಾಕಿನಾ 0–3 ಹಿನ್ನಡೆಯಲ್ಲಿದ್ದರು ಮತ್ತು ಸಬಾಲೆಂಕಾ ತಮ್ಮ ಸತತ ಮೂರನೇ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಯನ್ನು ಗೆಲ್ಲುವ ಹಾದಿಯಲ್ಲಿದ್ದರು. ಆದಾಗ್ಯೂ, ಅಲ್ಲಿಂದ ರೈಬಾಕಿನಾ ಅಗಾಧವಾದ ಸಂಯಮವನ್ನು ತೋರಿಸಿದರು, ಸತತ ಐದು ಗೇಮ್‌ಗಳನ್ನು ಗೆದ್ದು ಪಂದ್ಯವನ್ನು ತಿರುಗಿಸಿದರು. ತಮ್ಮ ಮೊದಲ ಚಾಂಪಿಯನ್ ಶಿಪ್ ಪಾಯಿಂಟ್‌ನಲ್ಲಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು.

# ಪಾಕ್ ವಿರುದ್ಧ ಮುಗ್ಗರಿಸಿದ ವೈಭವ್




ಅಂಡರ್–19 ವಿಶ್ವಕಪ್‌ನಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಿವೆ. ಈ ಪಂದ್ಯದಲ್ಲಿ ಎಲ್ಲರ ದೃಷ್ಟಿ ವೈಭವ್ ಸೂರ್ಯವಂಶಿ ಮೇಲಿದ್ದವು. ಆದರೆ ಈ ಪಂದ್ಯದಲ್ಲಿ ವೈಭವ್‌ಗೆ ನಿರೀಕ್ಷೆಗೆ ತಕ್ಕಂತೆ ಆಡಲು ಸಾಧ್ಯವಾಗಲಿಲ್ಲ. ಪಾಕ್ ವಿರುದ್ಧ ಮೊದಲು ಬ್ಯಾಟಿಂಗ್ ಮಾಡುತ್ತಿರುವ ಟೀಂ ಇಂಡಿಯಾ ಪರ ಆರಂಭಿಕನಾಗಿ ಕಣಕ್ಕಿಳಿದ ವೈಭವ್ ಸತತ ಎರಡು ಎಸೆತಗಳಲ್ಲಿ ಮೂರು ಜೀವದಾನ ಸಿಕ್ಕರೂ ಅದನ್ನು ಸದುಪಯೋಗಪಡಿಸಿಕೊಳ್ಳಲಾಗದೆ 30 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ವಿಶ್ವದ ಬಲಿಷ್ಠ ತಂಡಗಳೆದುರು ಅಬ್ಬರಿಸಿರುವ ವೈಭವ್‌ಗೆ ಪಾಕಿಸ್ತಾನದ ವಿರುದ್ಧ ಮಾತ್ರ ದೊಡ್ಡ ಇನ್ನಿಂಗ್ಸ್ ಆಡಲು ಸಾಧ್ಯವಾಗುತ್ತಿಲ್ಲ. ಈ ಹಿಂದೆ ನಡೆದಿದ್ದ ಅಂಡರ್ 19 ಏಷ್ಯಾಕಪ್ ಫೈನಲ್‌ನಲ್ಲೂ ವೈಭವ್ ಬ್ಯಾಟ್ ಅಬ್ಬರಿಸಿರಲಿಲ್ಲ. ಇದೀಗ ವಿಶ್ವಕಪ್‌ನಲ್ಲೂ ಅದೇ ಸಂಭವಿಸಿದೆ.

**ಸತತ 2 ಜೀವದಾನ:** ಈ ಪಂದ್ಯದಲ್ಲಿ ವೈಭವ್ ಮತ್ತು ಆರನ್ ಜಾರ್ಜ್ ಮೊದಲ ಎರಡು ಅಥವಾ ಮೂರು ಓವರ್‌ಗಳಲ್ಲಿ ಎಚ್ಚರಿಕೆಯಿಂದ ಆಡಿದರಾದರೂ ಬೇಗನೇ ವಿಕೆಟ್ ಕಳೆದುಕೊಂಡರು. ವಿಶೇಷವಾಗಿ ಆಕ್ರಮಣಕಾರಿ ಆಟಕ್ಕೆ ಮುಂದಾದ ವೈಭವ್ ನಾಲ್ಕನೇ ಓವರ್‌ನಲ್ಲಿ ಎರಡು ಬೌಂಡರಿ ನಂತರ ಏಳನೇ ಓವರ್‌ನಲ್ಲಿ ಸತತ ಎಸೆತಗಳಲ್ಲಿ ಒಂದು ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದರು. ಆದರೆ 8ನೇ ಓವರ್‌ನಲ್ಲಿ ಎಲ್ಲವೂ ಇದ್ದಕ್ಕಿದ್ದಂತೆ ಬದಲಾಯಿತು. ಎಡಗೈ ವೇಗದ ಬೌಲರ್ ಮೊಹಮ್ಮದ್ ಸಯಾಮ್ ಎಸೆದ ಈ ಓವರ್‌ನಲ್ಲಿ, ವೈಭವ್ ಸತತ ಎರಡು ಎಸೆತಗಳಲ್ಲಿ ಮೂರು ಬಾರಿ ಪಾಕಿಸ್ತಾನಕ್ಕೆ ವಿಕೆಟ್ ಪಡೆಯುವ ಅವಕಾಶ ನೀಡಿದರು.ಹೌದು, ವೈಭವ್ ಎರಡು ಎಸೆತಗಳಲ್ಲಿ ಪಾಕಿಸ್ತಾನಕ್ಕೆ ಮೂರು ಅವಕಾಶಗಳನ್ನು ಸೃಷ್ಟಿಸಿದರು. ಓವರ್‌ನ ಮೂರನೇ ಎಸೆತದಲ್ಲಿ, ವೈಭವ್ ಪುಲ್ ಮಾಡಲು ಪ್ರಯತ್ನಿಸಿದರು, ಆದರೆ ಚೆಂಡು ಮಿಡ್ ವಿಕೆಟ್‌ನಲ್ಲಿ ಗಾಳಿಯಲ್ಲಿ ಎತ್ತರಕ್ಕೆ ಹಾರಿಹೋಯಿತು. ಫೀಲ್ಡರ್ ಸುಲಭವಾದ ಕ್ಯಾಚ್ ಅನ್ನು ಕೈಬಿಟ್ಟರು. ಈ ಸಮಯದಲ್ಲಿ, ಭಾರತೀಯ ಬ್ಯಾಟ್ಸ್‌ಮನ್‌ಗಳ ನಡುವೆ ರನ್ ಓಡುವ ಬಗ್ಗೆ ಗೊಂದಲ ಉಂಟಾದ್ದರಿಂದ ವೈಭವ್ ರನೌಟ್‌ಗೆ ಬಲಿಯಾಗಬೇಕಿತ್ತು. ಆದರೆ ಕ್ಯಾಚ್ ಬಿಟ್ಟ ಫೀಲ್ಡರ್ ಚೆಂಡನ್ನು ವಿಕೆಟ್‌ನತ್ತ ಎಸೆದರು, ಅಲ್ಲಿ ಕೀಪರ್ ಇರದ ಕಾರಣ ರನೌಟ್‌ನಿಂದಲೂ ಪಾರಾದರು.

**30 ರನ್ ಗಳಿಸಿ ಔಟಾದ ವೈಭವ್:** ಒಂದೇ ಚೆಂಡಿನಲ್ಲಿ ಎರಡು ಬಾರಿ ಔಟ್ ಆಗುವುದನ್ನು ತಪ್ಪಿಸಿಕೊಂಡ ನಂತರ ವೈಭವ್ ಮತ್ತು ಅಭಿಮಾನಿಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಆದರೆ ಮುಂದಿನ ಎಸೆತದಲ್ಲಿಯೇ ವೈಭವ್ ಮತ್ತೆ ಅದೇ ಹೊಡೆತವನ್ನು ಆಡಲು ಯತ್ನಿಸಿ ವಿಕೆಟ್ ಕೀಪರ್ ಕೈಗೆ ಕ್ಯಾಚಿತ್ತು ನಿರ್ಗಮಿಸಿದರು. ಅಂತಿಮವಾಗಿ ವೈಭವ್ 22 ಎಸೆತಗಳಲ್ಲಿ 30 ರನ್ ಗಳಿಸಿ ಔಟಾದರು. ಪಾಕಿಸ್ತಾನ ವಿರುದ್ಧ ಇದು ಸತತ ಮೂರನೇ ಪಂದ್ಯವಾಗಿದ್ದು, ಇದಕ್ಕೂ ಮೊದಲು ಅವರು ಏಷ್ಯಾಕಪ್‌ನ ಎರಡು ಪಂದ್ಯಗಳಲ್ಲಿ 5 ಮತ್ತು 26 ರನ್ 2 ಬಾರಿಸಿದ್ದರು. ವೈಭವ್ ಔಟಾದ ನಂತರ ಭಾರತ ಕೇವಲ ನಾಲ್ಕು ಎಸೆತಗಳಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಎಂಟನೇ ಓವರ್‌ನ ನಾಲ್ಕನೇ ಎಸೆತದಲ್ಲಿ ವೈಭವ್ ಔಟಾದರೆ, ಎರಡು ಎಸೆತಗಳ ನಂತರ, ಹೊಸ ಬ್ಯಾಟ್ಸ್‌ಮನ್ ಮತ್ತು ನಾಯಕ ಆಯುಷ್ ಮ್ಹಾತ್ರೆ ರನ್ ಗಳಿಸದೆ ಅದೇ ಬೌಲರ್‌ಗೆ ವಿಕೆಟ್ ಒಪ್ಪಿಸಿದರು.

# ಆಸ್ಟ್ರೇಲಿಯಾ ಅಂತಿಮ ತಂಡ ಪ್ರಕಟ; ಪ್ಯಾಟ್ ಕಮ್ಮಿನ್ಸ್ ಔಟ್



ಮುಂದಿನ ವಾರದಿಂದ ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿರುವ ಐಸಿಸಿ ಪುರುಷರ ಟಿ20 ವಿಶ್ವಕಪ್‌ಗಾಗಿ ಆಸ್ಟ್ರೇಲಿಯಾ' ತನ್ನ 15 ಸದಸ್ಯರ ತಂಡವನ್ನು ಪ್ರಕಟಿಸಿದೆ. ಪ್ರಧಾನ ವೇಗಿ, ಟೆಸ್ಟ್ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್ ಬೆನ್ನುನೋವಿನಿಂದಾಗಿ ಪಂದ್ಯಾವಳಿಯಿಂದ ಹೊರಗುಳಿಯಲಿದ್ದಾರೆ. ಅವರ ಬದಲು ವೇಗಿ ಬೆನ್ ದ್ವಾರಶುಯಿಸ್ ಸ್ಥಾನ ಪಡೆದಿದ್ದಾರೆ. ತಾತ್ಕಾಲಿಕ ತಂಡದಲ್ಲಿ ಪ್ಯಾಟ್ ಕಮಿನ್ಸ್ ಅವರನ್ನೂ ಆಯ್ಕೆ ಮಾಡಲಾತ್ತು. ಆದರೆ ಅವರು ಸಂಪೂರ್ಣವಾಗಿ ಗುಣಮುಖರಾಗದ ಕಾರಣ ಅವರನ್ನು ಅಂತಿಮ ತಂಡದಿಂದ ಕೈಬಿಡಲಾಗಿದೆ. ತಾತ್ಕಾಲಿಕ ತಂಡದಲ್ಲಿದ್ದ ಮ್ಯಾಟ್ ಶಾರ್ಟ್ ಅವರನ್ನು ಕೈಬಿಡಲಾಗಿದ್ದು, ಅವರ ಸ್ಥಾನದಲ್ಲಿ ಮ್ಯಾಟ್ ರೆನ್‌ಶಾ ಅವರನ್ನು ಆಯ್ಕೆ ಮಾಡಲಾಗಿದೆ. ಬ್ಯಾಟ್ಸ್‌ಮನ್ ಸ್ಟೀವ್ ಸ್ಮಿತ್ ತಂಡದಲ್ಲಿ ಸ್ಥಾನ ಪಡೆಯಲು ಸಾಧ್ಯವಾಗಲಿಲ್ಲ. ತಂಡವನ್ನು ಮಿಚೆಲ್ ಮಾರ್ಷ್ ಮುನ್ನಡೆಸಲಿದ್ದಾರೆ.ಬೆನ್ನಿನ ಗಾಯದಿಂದ ಚೇತರಿಸಿಕೊಳ್ಳಲು ಪ್ಯಾಟ್‌ಗೆ ಹೆಚ್ಚಿನ ಸಮಯ ಬೇಕಾಗಿರುವುದರಿಂದ, ಅವರ ಬದಲಿಗೆ ದ್ವಾರಶುಯಿಸ್‌ಗೆ ಅವಕಾಶ ನೀಡಲಾಗಿದೆ. ಅವರು ಎಡಗೈ ವೇಗದ ಬೌಲರ್ ಆಗಿದ್ದು, ಕ್ರಿಯಾತ್ಮಕ ಫೀಲ್ಡಿಂಗ್ ಮತ್ತು ಬ್ಯಾಟಿಂಗ್ ಸಾಮರ್ಥ್ಯವನ್ನು ಹೊಂದಿದ್ದಾರೆ. ಉತ್ತಮ ವೇಗದಲ್ಲಿ ಚೆಂಡನ್ನು ಸ್ವಿಂಗ್ ಮಾಡುವ ಅವರ ಸಾಮರ್ಥ್ಯ ತಂಡದ ಒಟ್ಟಾರೆ ರಚನೆಗೆ ಸೂಕ್ತವಾಗಿರುತ್ತದೆ ಎಂದು ನಾವು ನಂಬುತ್ತೇವೆ ಎಂದು ಆಸ್ಟ್ರೇಲಿಯಾದ ಆಯ್ಕೆದಾರ ಟೋನಿ ಡೋಡೆಮೈಡ್ ಹೇಳಿದರು.

# ಕಿಬ್ಬೊಟ್ಟೆ ಗಾಯಕ್ಕೆ ಶಸ್ತ್ರಚಿಕಿತ್ಸೆ ಮಾಡಿಕೊಂಡಿರುವ ತಿಲಕ್



ವರ್ಮಾ ಸಂಪೂರ್ಣ ಚೇತರಿಕೆ ಕಂಡಿದ್ದು, ಅವರಿಗೆ ಬಿಸಿಸಿಐ ಫಿಟ್ನೆಸ್ ಸರ್ಟಿಫಿಕೇಟ್ ನೀಡಿದೆ. ಹೀಗಾಗಿ ಅವರು ಟಿ20 ವಿಶ್ವಕಪ್ ಆಡುವುದು ಖಚಿತವಾಗಿದ್ದು ಈ ನಿಟ್ಟಿನಲ್ಲಿ ಅವರು ಕ್ರಿಕೆಟ್, ವ್ಯಾಯಾಮ, ಜಿಮ್‌ನಲ್ಲಿ ಕಠಿಣ ತರಬೇತಿ ಆರಂಭಿಸಿದ್ದಾರೆ. ಇದರ ವಿಡಿಯೊವನ್ನು ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.ಫೆಬ್ರವರಿ 7 ರಿಂದ ಪ್ರಾರಂಭವಾಗುವ 20 ತಂಡಗಳ ಟೂರ್ನಮೆಂಟ್‌ನಲ್ಲಿ ಭಾರತೀಯ ತಂಡದ ಪ್ರಮುಖ ಆಟಗಾರನಾಗಲಿರುವ ಹೈದರಾಬಾದ್‌ನ 23 ವರ್ಷದ ಎಡಗೈ ಬ್ಯಾಟ್ಸ್‌ಮನ್ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಅದರಲ್ಲಿ ಅವರು ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡುವುದನ್ನು ಕಾಣಬಹುದು.ಸೆಪ್ಟೆಂಬರ್ 28, 2025ರಂದು ದುಬೈ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಏಷ್ಯಾಕಪ್ 2025 ರ ಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ಪರ ಅದ್ಭುತ ಅರ್ಧಶತಕ ಗಳಿಸಿ ಭಾರತವನ್ನು ಗೆಲುವಿನ ಹಳಿ ಸೇರಿಸಿದ್ದರು. ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸುವ ಎಡಗೈ ಬ್ಯಾಟ್ಸ್‌ಮನ್, 20 ಓವರ್‌ಗಳ ಮಾದರಿಯಲ್ಲಿ ಭಾರತದ ನಿಯೋಜಿತ ನಂ. 3 ಬ್ಯಾಟ್ಸ್‌ಮನ್. ತಿಲಕ್ ಅನುಪಸ್ಥಿತಿಯಲ್ಲಿ, ನ್ಯೂಜಿಲೆಂಡ್ ವಿರುದ್ಧದ ಮೊದಲ ಮೂರು ಟಿ20ಐಗಳಲ್ಲಿ ಇಶಾನ್ ಕಿಶನ್ ಭಾರತ ಪರ ನಂ. 3 ಬ್ಯಾಟಿಂಗ್ ಮಾಡಿದರು. ಡಿಸೆಂಬರ್ 19, 2025 ರಂದು ಅಹಮದಾಬಾದ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಐದನೇ U20M ನಲ್ಲಿ ಭಾರತ ಪರ ಕೊನೆಯ ಬಾರಿಗೆ ಆಡಿದ ತಿಲಕ್, ಕೇವಲ 42 ಎಸೆತಗಳಲ್ಲಿ 3ನೇ ಕ್ರಮಾಂಕದ ಬ್ಯಾಟ್ಸ್‌ಮನ್ ಆಗಿ 73 ರನ್ ಗಳಿಸಿದ್ದರು.

# 5 ವಿಕೆಟ್ ಪಡೆದ ಹೊರತರಾಗಿಯೂ ಅನಗತ್ಯ ದಾಖಲೆ ಹೆಗಲೇರಿಸಿಕೊಂಡ ಅರ್ಷದೀಪ್



ದುಬಾರಿ ಐದು ವಿಕೆಟ್ ಸಾಧನೆ

ಐದು ಪಂದ್ಯಗಳ ಟಿ20ಐ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ ತಂಡ, ನ್ಯೂಜಿಲೆಂಡ್ ತಂಡವನ್ನು 46 ರನ್‌ಗಳಿಂದ ಸೋಲಿಸಿತು. ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ತನ್ನ ಪಾಲಿನ 20 ಓವರ್‌ಗಳಿಗೆ 5 ವಿಕೆಟ್ ನಷ್ಟಕ್ಕೆ 271 ರನ್‌ಗಳನ್ನು ದಾಖಲಿಸಿತು. ಬಳಿಕ ಗುರಿಯನ್ನು ಹಿಂಬಾಲಿಸಿದ ನ್ಯೂಜಿಲೆಂಡ್ 225 ರನ್‌ಗಳನ್ನು ಗಳಿಸಲು ಶಕ್ತವಾಯಿತು. ಒಂದು ಹಂತದಲ್ಲಿ, ನ್ಯೂಜಿಲೆಂಡ್ ಗುರಿಯತ್ತ ವೇಗವಾಗಿ ಮುನ್ನಡೆಯುತ್ತಿತ್ತು. ಆದರೆ, ಅರ್ಷದೀಪ್ ಸಿಂಗ್ ಅವರ ಅದ್ಭುತ ಪ್ರದರ್ಶನದಿಂದಾಗಿ, ಟೀಮ್ ಇಂಡಿಯಾ ಗೆಲುವು ಸಾಧಿಸಿತು. ಈ ಪಂದ್ಯದಲ್ಲಿ ಅರ್ಷದೀಪ್ ಸಿಂಗ್ ಐದು ವಿಕೆಟ್‌ಗಳನ್ನು ಕಬಳಿಸಿದರು, ಆದರೆ ಇದರ ಹೊರತಾಗಿಯೂ, ಅನಗತ್ಯ ದಾಖಲೆಯೊಂದನ್ನು ಹೆಗಲೇರಿಸಿಕೊಂಡಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಐದನೇ ಟಿ20ಐ ಪಂದ್ಯದಲ್ಲಿ ಅರ್ಷದೀಪ್ ಸಿಂಗ್ 5 ವಿಕೆಟ್‌ಗಳನ್ನು ಕಬಳಿಸಿದರು. ಅವರು ತಮ್ಮ ನಾಲ್ಕು ಓವರ್‌ಗಳಲ್ಲಿ 51 ರನ್‌ಗಳಿಗೆ 5 ವಿಕೆಟ್‌ಗಳನ್ನು ಕಬಳಿಸಿದರು. ಇದರಲ್ಲಿ ಅವರು ತಮ್ಮ ಆರಂಭಿಕ ಎರಡು ಓವರ್‌ಗಳಲ್ಲಿ 40 ರನ್‌ಗಳನ್ನು ಬಿಟ್ಟುಕೊಟ್ಟಿದ್ದರು ಮತ್ತು ಕೇವಲ ಒಂದು ವಿಕೆಟ್ ಪಡೆದಿದ್ದರು. ಆದಾಗ್ಯೂ, ಕೊನೆಯ ಎರಡು ಓವರ್‌ಗಳಲ್ಲಿ ಅವರು 11 ರನ್‌ಗಳನ್ನು ಬಿಟ್ಟುಕೊಟ್ಟು ನಾಲ್ಕು ವಿಕೆಟ್‌ಗಳನ್ನು ಕಬಳಿಸುವ ಮೂಲಕ ಗಮನಾರ್ಹ ಕಮ್‌ಬ್ಯಾಕ್ ಮಾಡಿದರು. ಈ ಪಂದ್ಯದಲ್ಲಿ ಅರ್ಷದೀಪ್ ಸಿಂಗ್ ಐದು ವಿಕೆಟ್‌ಗಳನ್ನು ಪಡೆದರೂ ಅನಗತ್ಯ ದಾಖಲೆಯೊಂದನ್ನು ಹೆಗಲೇರಿಸಿಕೊಂಡಿದ್ದಾರೆ. ಅವರು ತಮ್ಮ ಐದು ವಿಕೆಟ್‌ಗಳಿಗೆ 51 ರನ್‌ಗಳನ್ನು ನೀಡಿದರು. ಇದು ಟಿ20ಐ ಕ್ರಿಕೆಟ್ ಇತಿಹಾಸದಲ್ಲಿ ಅತ್ಯಂತ ದುಬಾರಿ ಐದು ವಿಕೆಟ್ ಸಾಧನೆಯಾಗಿದೆ. ಅರ್ಷದೀಪ್ ಸಿಂಗ್ ಈ ಪಂದ್ಯದಲ್ಲಿ ಅತಿ ಹೆಚ್ಚು ವಿಕೆಟ್‌ಗಳನ್ನು ಪಡೆದರೂ ರನ್‌ಗಳನ್ನು ಬಿಟ್ಟುಕೊಡುವ ವಿಷಯದಲ್ಲಿ ಅವರು ದುಬಾರಿ ಎಂದು ಸಾಬೀತುಪಡಿಸಿದರು.

**ಭಾರತ ತಂಡಕ್ಕೆ 46 ರನ್ ಜಯ:** ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ ತಂಡ 5 ವಿಕೆಟ್ ನಷ್ಟಕ್ಕೆ 271 ರನ್ ಗಳಿಸಿತು. ಇಶಾನ್ ಕಿಶನ್ 103 ರನ್ ಗಳಿಸುವ ಮೂಲಕ ಭಾರತದ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ನಾಯಕ ಸೂರ್ಯಕುಮಾರ್ ಯಾದವ್ ಕೂಡ 30 ಎಸೆತಗಳಲ್ಲಿ 63 ರನ್ ಗಳಿಸಿದರು. ಹಾರ್ದಿಕ್ ಪಾಂಡ್ಯ 42 ಮತ್ತು ಅಭಿಷೇಕ್ ಶರ್ಮಾ 30 ರನ್ ಗಳಿಸಿದರು.

**ನ್ಯೂಜಿಲೆಂಡ್ 225ಕ್ಕೆ ಆಲ್‌ಔಟ್:** ಇದಕ್ಕೆ ಪ್ರತಿಕ್ರಿಯೆಯಾಗಿ, ನ್ಯೂಜಿಲೆಂಡ್ ತಂಡ ಆಕ್ರಮಣಕಾರಿ ಆಟವನ್ನು ಆಡಿತು. ವಿಶೇಷವಾಗಿ ಫಿನ್ ಆಲೆನ್ 38 ಎಸೆತಗಳಲ್ಲಿ 80 ರನ್ ಗಳಿಸುವ ಮೂಲಕ ಟೀಮ್ ಇಂಡಿಯಾವನ್ನು ಸಂಕಷ್ಟಕ್ಕೆ ಸಿಲುಕಿಸಿದ್ದರು.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966